# ಲಿಂಗಾಧಾರಿತ ಶ್ರೇಣೀಕರಣದ ಇತಿಹಾಸ

ಯಾವುದೇ ಸಮಾಜದಲ್ಲಿ ವ್ಯಕ್ತಿಗಳ ಪಾತ್ರ ಮತ್ತು ಅವರ ನಡುವಿನ ಅಸಮಾನತೆಗಳು ಲಿಂಗಾಧಾರಿತವಾಗಿಯೇ ಇರುವುದನ್ನು ಹಿಂದಿನಿಂದ ಇಂದಿನವರೆಗೂ ನಡೆದ ಚರಿತ್ರೆಯಲ್ಲಿ ಕಾಣುತ್ತೇವೆ ಮತ್ತು ಈ ಅಂಶಗಳು ವಿವಿಧ ಸಮಾಜಗಳ ನಡುವೆ ಹಾಗೂ ಒಂದೇ ಸಮಾಜದಲ್ಲಿ ಆಂತರಿಕವಾಗಿ ಸಾಕಷ್ಟು ವಿಭಿನ್ನವಾಗಿರುವುದನ್ನೂ ಕಂಡಿದ್ದೇವೆ. ಜೀವನದ ಮೂಲಭೂತ ಅವಶ್ಯಕತೆಗಳನ್ನು ಹಾಗೂ ಆಹಾರ, ವಸತಿ ಮತ್ತು ಉಡುಪುಗಳನ್ನು ಪಡೆಯುವ ನಿಟ್ಟಿನ ಉತ್ಪಾದನಾ ಕ್ರಿಯೆಗಳಿಗೆ ಸಂಬಂಧಿಸಿದಂತೆ ಪುರುಷರು ಮತ್ತು ಮಹಿಳೆಯರ ವಾಸ್ತವಿಕ ಅಥವ ಗ್ರಹಿಸಲ್ಪಟ್ಟ ಕಾಣಿಕೆಯು ಅವರ ಸಾಮಾಜಿಕ ಸ್ಥಾನಮಾನದ ಮೇಲೆ ಗಮನಾರ್ಹ ಪ್ರಭಾವವನ್ನು ಬೀರಿದೆ. ಮೂರನೆಯ ಅಧ್ಯಾಯದಲ್ಲಿ ಗಮನಿಸಿರುವಂತೆ, ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ, ಹೊಸ ಶಿಲಾಯುಗದ ಜನರಲ್ಲಿ ಘಟಿಸಿದ ತೀವ್ರ ಬದಲಾವಣೆಗಳಿಗೂ ಮುನ್ನ ಬೇಟೆ ಮತ್ತು ಸಂಗ್ರಹಣೆಯಲ್ಲಿ ತೊಡಗಿದ್ದ ಬುಡಕಟ್ಟುಗಳಲ್ಲಿನ ಗಂಡು ಹೆಣ್ಣುಗಳ ಅಂತಸ್ತಿನ ಮಟ್ಟವು, ಬೇಟೆ Vs (ವಿರುದ್ಧ) ಸಂಗ್ರಹಣೆಯ ಮಿಶ್ರಿತ ಪ್ರಕ್ರಿಯೆಯನ್ನು ಆಧರಿಸಿತ್ತು. ಬೇಟೆಯನ್ನಾಧರಿಸಿದ ಬುಡಕಟ್ಟುಗಳಲ್ಲಿ ಮುಖ್ಯವಾಗಿ, ಜೈವಿಕ ಕಾರಣಗಳಿಂದಾಗಿ, ಸಾಮಾನ್ಯವಾಗಿ ಪುರುಷರು ಪ್ರಬಲರಾಗಿದ್ದು, ಹೆಚ್ಚಿನ ಅಂತಸ್ತನ್ನು ಪಡೆದಿದ್ದರು: ಆದರೆ ದೊಡ್ಡ ಸಂಖ್ಯೆಯಲ್ಲಿದ್ದು, ಬೇಟೆಯನ್ನು ಹೆಚ್ಚಾಗಿ ಆಧರಿಸಿಲ್ಲದ ಬುಡಕಟ್ಟುಗಳಲ್ಲಿನ ಸ್ತ್ರೀ ಪುರುಷರಲ್ಲಿ ಹೆಚ್ಚಿನ ಸಮಾನತೆಯಿತ್ತು. ಡೊಬಿ ಕುಂಗ್ ಬುಡಕಟ್ಟಿನಲ್ಲಿ ಈ ಮಾತಿಗೆ ಅಪವಾದವನ್ನು ಕಾಣಬಹುದು. ಬೇಟೆಯಾಡಿ ಆಹಾರವನ್ನು ಸಂಪಾದಿಸುವ ಪ್ರಕ್ರಿಯೆಯಲ್ಲಿ ಬಾಣಗಳನ್ನು ತಯಾರಿಸುವಲ್ಲಿನ ಕೌಶಲ ಅತಿ ಮುಖ್ಯ ಎಂಬುವ ನಂಬಿಕೆ ಆ ಜನರದು. ಅವರಲ್ಲಿ ಬೇಟೆಯಾಡುವವರೇನೋ ಪುರುಷರೇ, ಆದರೆ ಮಹಿಳೆಯರೂ ಸಹ ಪುರುಷರಷ್ಟೇ ಕೌಶಲವನ್ನು ಬಾಣಗಳನ್ನು ಸಿದ್ಧಪಡಿಸುವಲ್ಲಿ ತೋರುತ್ತಿದ್ದರು. ಪುರುಷರು – ಸ್ತ್ರೀಯರ ಅಸಮಾನತೆಯ ಪ್ರಮಾಣವು ಆಹಾರಕ್ಕಾಗಿ ಸಂಗ್ರಹಣೆಯನ್ನು ಪ್ರಧಾನವಾಗಿ ಆಧರಿಸಿದ ಬುಡಕಟ್ಟಿನಲ್ಲಿರುವಷ್ಟೇ ಇತ್ತು. (ಲೀ 1985).

ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆ ಮಾನವರು ಬೇಟೆ ಮತ್ತು ಸಂಗ್ರಹಣೆಯ ಹಂತಗಳನ್ನು ದಾಟಿ ಸರಳವಾದ ತೋಟಗಾರಿಕೆಯನ್ನು ಆರಂಭಿಸಿದರು. ಈ ಹಂತದಲ್ಲಿ ವಾಸ್ತವವಾಗಿ ಗಮನಾರ್ಹ ವ್ಯತ್ಯಾಸ ಹಾಗೂ ಸಂಕೀರ್ಣತೆಗಳಿದ್ದಾಗ್ಯೂ, ಸ್ತ್ರೀ ಪುರುಷರ ನಡುವಿನ ಅಸಮಾನತೆಯು ಕ್ರಮಶಃ ಹೆಚ್ಚಾಗತೊಡಗಿತು. ಉದಾಹರಣೆಗೆ, ಕೆಲವು ಸಮಾಜಗಳಲ್ಲಿ, ಮಹಿಳೆಯರು ಆಹಾರ ಶೇಖರಣೆಯ ಜೊತೆಗೇ ಬೇಟೆಯಲ್ಲಿಯೂ ಪಾಲ್ಗೊಳ್ಳುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಸರಳ ತೋಟಗಾರಿಕೆಯೊಂದಿಗೆ, ಸಂಗ್ರಹಣೆ ಮತ್ತು ಬೇಟೆಯೂ ನಡೆಯುತ್ತಿತ್ತೆಂದು ಈಗಲೂ ಅಸ್ತಿತ್ವದಲ್ಲಿರುವ ಕೆಲವು ಸಮುದಾಯಗಳ ಮಾನವ ಶಾಸ್ತ್ರೀಯ ಸಂಶೋಧನೆಗಳು ತಿಳಿಸಿವೆ. ಇದಕ್ಕೊಂದು ಉದಾಹರಣೆಯೆಂದರೆ, ಫಿಲಿಪೀನ್ಸ್ ಆಗ್ಟಾ ಬುಡಕಟ್ಟಿನ ಅನೇಕ ಮಹಿಳೆಯರು. ಅವರು ಬೇಟೆಯಾಡುವುದೇ ಅಲ್ಲದೆ, ವ್ಯಾಪಾರದ ಜೊತೆಯಲ್ಲಿಯೇ ಆಹಾರಕ್ಕಾಗಿ ಅರಣ್ಯದ ಉತ್ಪನ್ನಗಳ ಸಂಗ್ರಹಣೆ ಹಾಗೂ ಮೀನುಗಾರಿಕೆಗಳಲ್ಲಿಯೂ ತೊಡಗಿದ್ದರು (ಎಸ್ಟಿಯೋಕೋ - ಗ್ರಿಫಿನ್ ಮತ್ತು ಗಿಫಿನ್, 1981). ಕೆಲವೆಡೆಗಳಲ್ಲಿ ಮಹಿಳೆಯರು ಬಿಲ್ಲುಬಾಣಗಳನ್ನು ಬಳಸಿ ಬೇಟೆಯಾಡುತ್ತಿದ್ದುದೇ ಅಲ್ಲದೆ, ಆಹಾರವನ್ನೂ ಬೆಳೆಯುತ್ತಿದ್ದರು. ಇಂಥ ಸಮಾಜಗಳಲ್ಲಿ ಮಹಿಳೆಯರು ಉತ್ಪಾದಕ ಕೆಲಸಗಳನ್ನು ಹಾಗೂ ಮದುವೆ ಮತ್ತು ಕೌಟುಂಬಿಕ ಸಂಬಂಧಗಳನ್ನು ನಿರ್ಣಯಿಸುವುದರಲ್ಲಿ ಪುರುಷರಿಗೆ ಸಮಾನವಾದ ಅಧಿಕಾರವನ್ನು ಪಡೆದಿದ್ದರು. ದಕ್ಷಿಣ ಪೆಸಿಫಿಕ್‌ನ ವನತಿನೈ ಬುಡಕಟ್ಟಿನಲ್ಲಿ ನಮ್ಯತೆ (flexibility) ಹಾಗೂ ಸ್ತ್ರೀ ಪುರುಷರಿಬ್ಬರೂ ಒಂದೇ ರೀತಿಯಲ್ಲಿ ಎಲ್ಲ ಚಟುವಟಿಕೆಗಳನ್ನು ಕೈಗೊಳ್ಳುವುದರ ಜೊತೆಗೆ ಲಿಂಗ ಸಮಾನತೆಯು ಗಮನಾರ್ಹವಾಗಿತ್ತು (ಲೆಫೋಸ್ಕಿ 1993). ಬಹುತೇಕ ಕೆಲಸವು, ಸರಳ ತೋಟಗಾರಿಕೆ ಹಾಗೂ ಕೆಲವು ಬೇಟೆಗಳನ್ನು ಒಳಗೊಂಡಿತ್ತು. ಗಿಡಗಳನ್ನು ನೆಡುವ ಹಾಗೂ ತೋಟವನ್ನು ನಿರ್ವಹಿಸುವ ಕೆಲಸವು ಮುಖ್ಯವಾಗಿ ಮಹಿಳೆಯರ ಹೊಣೆಗಾರಿಕೆಯಾಗಿದ್ದು, ಕಳೆ ತೆಗೆಯುವುದು ಮತ್ತು ಕೊಯ್ಲು, ಪುರುಷರ ಜವಾಬ್ದಾರಿಯಾಗಿತ್ತು. ಆದರೆ ಆಹಾರ ಶೇಖರಣೆ ಮತ್ತು

ಬೇಟೆ ಎರಡರಲ್ಲಿಯೂ ಸ್ತ್ರೀ ಪುರುಷರು ಸಮಾನವಾಗಿ ಭಾಗವಹಿಸುತ್ತಿದ್ದರು. ಅಲ್ಲದೆ, ತಮ್ಮ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಿಕೊಳ್ಳಲು ತಮ್ಮ ಸಾಮರ್ಥ್ಯ ಹಾಗೂ ಅಭಿರುಚಿಗಳಿಗೆ ತಕ್ಕಂತೆ ವಸ್ತುಗಳ ವಿನಿಮಯದ ಹಲವಾರು ಚಟುವಟಿಕೆಗಳಲ್ಲಿಯೂ ತೊಡಗುತ್ತಿದ್ದರು.

ಅರೆ-ಅಲೆಮಾರಿಗಳಾಗಿದ್ದು, ಪಶುಪಾಲನೆಯನ್ನು ನಡೆಸುತ್ತಿದ್ದ ಹಲವು ಸಮಾಜಗಳಲ್ಲಿ ಪ್ರಾಥಮಿಕ ಆರ್ಥಿಕ ಚಟುವಟಿಕೆಗಳು ಪುರುಷರ ಹೊಣೆಯಾಗಿದ್ದರೂ, ಮಹಿಳೆಯರೂ ಸಹ ಕೆಲವು ಕೃಷಿ ಕೆಲಸಗಳಲ್ಲಿ ಭಾಗಿಗಳಾಗುತ್ತಿದ್ದರು.ಲಿಂಗಾಧಾರಿತ ಪಾತ್ರಗಳು ಮತ್ತು ಸ್ಥಾನಮಾನಗಳಲ್ಲಿ ಗಮನಾರ್ಹ ಪರಿವರ್ತನೀಯತೆ (variability) ಮತ್ತು ನಮ್ಯತೆ ಇತ್ತು (ರಾಸ್ಮ್ಯೂಸೆನ್, 2001). ಇವು ಬಹುತೇಕವಾಗಿ ಸ್ಥಳೀಯ ಸಂಸ್ಕೃತಿ ಹಾಗೂ ಚರಿತ್ರೆಗಳನ್ನು ಆಧರಿಸಿದ್ದವು. ಆಫ್ರಿಕನ್ ಸಹಾರಾ ಮತ್ತು ಸಾಹೆಲ್ ಪ್ರದೇಶಗಳ ಟುಆರೆಗ್ ಎಂಬ ಅರೆ-ಅಲೆಮಾರಿ ಬುಡಕಟ್ಟಿನ ಜನ ನೈಜರ್, ಮಾಲಿ, ಬುಕ್ರಿನ ಫಾಸೋ ಮತ್ತು ಆಲ್ಜೀರಿಯಾದ ಭಾಗಗಳಲ್ಲಿ ಚೆದುರಿಹೋಗಿದ್ದಾರೆ. ಈ ಬುಡಕಟ್ಟಿನ ಒಟ್ಟಾರೆ ಮಹಿಳೆಯರು ಗಮನಾರ್ಹ ರೀತಿಯಲ್ಲಿ ಹಕ್ಕುಗಳನ್ನೂ, ಅಧಿಕಾರವನ್ನು ಹೊಂದಿದ್ದಾರೆ. ಸಾರ್ವಜನಿಕವಾಗಿ ಸ್ತ್ರೀ ಪುರುಷರ ನಡುವೆ ಅಂತರವೂ ಕಾಣುವುದಿಲ್ಲ. ಬಹುಮಟ್ಟಿಗೆ ಅಲೆಮಾರಿ ಜೀವನ ನಡೆಸುವ, ಇಸ್ಲಾಮಿನ ಅಧಿಕೃತ ಕಟ್ಟಳೆಗಳ ಪ್ರಭಾವಕ್ಕೆ ಅಷ್ಟಾಗಿ ಒಳಗಾಗದ ಟುಆರೆಗ್ ಸಮುದಾಯಗಳು ಸ್ತ್ರೀ-ಪುರುಷರ ಪಾತ್ರಗಳು ಮತ್ತು ಸಂಬಂಧಗಳಲ್ಲಿ ಹೆಚ್ಚಿನ ಲಿಂಗ ಸಮಾನತೆ ಮತ್ತು ನಮ್ಯತೆಯನ್ನು ಪ್ರದರ್ಶಿಸುತ್ತವೆ. ಇಸ್ಲಾಮಿನ ಪ್ರಭಾವ ಹೆಚ್ಚಾಗಿರುವಾಗಲೂ, ಮಹಿಳೆಯರ ಪ್ರತ್ಯೇಕತೆಯಾಗಲಿ, ಬುರ್ಖಾ ಧರಿಸುವುದಾಗಲಿ ಕಂಡುಬರುವುದಿಲ್ಲ ಹಾಗೂ ಅವರು ಗಮನಾರ್ಹವಾದ ಆಸ್ತಿಯ ಹಕ್ಕುಗಳನ್ನು ಪಡೆದಿರುತ್ತಾರೆ.

ಮಹಿಳೆಯರು ತಮ್ಮ ಅಂತಸ್ತನ್ನು, ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದು, ಹೆಚ್ಚಿನ ದೈಹಿಕ ಚಟುವಟಿಕೆಯಿಲ್ಲದ ಜೀವನ ಶೈಲಿಯಿಂದಾಗಿ. ಆಧುನಿಕ ರಾಷ್ಟ್ರ ಪ್ರಭುತ್ವ ಹಾಗೂ ಅಧಿಕ ನಗರೀಕರಣದ ನಿಟ್ಟಿನ ಮಾರ್ಪಾಟುಗಳಿಂದಾಗಿ, ಮಹಿಳೆಯರ ಅಂತಸ್ತು ಹಾಗೂ ಸ್ವಾಯತ್ತತೆಗೆ ಹೆಚ್ಚಿನ ಹಾನಿಯುಂಟಾಗುತ್ತಿದೆ. ಆದರೆ, ಗ್ರಾಮೀಣ ಹೆಣ್ಣು ಮಕ್ಕಳು ದೈನಂದಿನ ಬಹುತೇಕ ಕಾರ್ಯಗಳಲ್ಲಿ ಭಾಗವಹಿಸುವುದು ನಡೆದೇ ಇದೆ. ಅಂಥಲ್ಲಿ ಮಹಿಳೆಯರ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆ ಅಬಾಧಿತವಾಗಿದೆ. ಆದರೆ ಹಲವು ದೇಶಗಳಲ್ಲಿನ ಆರ್ಥಿಕ ಬಿಕ್ಕಟ್ಟಿನಿಂದಾಗಿ, ಜೀವನ ನಿರ್ವಹಣೆಯು ಕಷ್ಟಕರವಾಗಿದ್ದು, ಲಿಂಗ ಸಮಾನತೆಯು ಮರೆಯಾಗುತ್ತಿದೆ. ಕೆಲವರು ಮಾನವ ಶಾಸ್ತ್ರಜ್ಞರ ಅಭಿಪ್ರಾಯದಲ್ಲಿ ತೋಟಗಾರಿಕೆ ಆರಂಭವಾದದ್ದೇ ಮಹಿಳೆಯರಿಂದ. ಹೀಗಿದ್ದರೂ, ಕೃಷಿ ಪ್ರಧಾನ ಸಮಾಜಗಳಲ್ಲಿಯೂ ಜಗತ್ತಿನಾದ್ಯಂತ ವೈವಿಧ್ಯತೆ ಇದ್ದು, ಈ ವೈವಿಧ್ಯತೆಯು ಕೈಗಾರಿಕಾಪೂರ್ವ ಸಮಾಜಗಳಲ್ಲಿಯೂ ಇತ್ತು ಎನ್ನುವುದು ಗಮನಾರ್ಹ ಅಂಶ. ಲಿಂಗಾಧಾರಿತ ಸಂಬಂಧಗಳ ವಿಷಯದ ಚರ್ಚೆಯ ಆರಂಭದಲ್ಲಿ ಥಾಯ್ಲೆಂಡ್‌ನಲ್ಲಿ ಲಿಂಗ ಸಮಾನತೆ ಇರುವುದನ್ನು ಗುರುತಿಸಿದ್ದೆವು. ಅಲ್ಲಿನ ವಾತಾವರಣ, ಜನರೆಲ್ಲರಿಗೂ ಭೂಮಿಯ ಲಭ್ಯತೆ ಮತ್ತು ಶತಮಾನಗಳ ಕಾಲ ಯುದ್ಧಗಳಿಲ್ಲದ ಪರಿಣಾಮವಾಗಿ ಅಲ್ಲಿನ ಪುರುಷರು ಯಾಜಮಾನ್ಯ ಧೋರಣೆಯವರಾಗಿಲ್ಲದಿರುವ ಸಾಧ್ಯತೆ ಇದೆ. ತಂದೆ ತಾಯಿಗಳಿಬ್ಬರ ಮೂಲವನ್ನೂ ಆಧರಿಸಿ ವಾರಸುದಾರಿಕೆ ಇತ್ಯರ್ಥಗೊಳ್ಳುವುದೂ ಸಹ ಇದಕ್ಕೆ ಕಾರಣ. (ಕೆಲಮಟ್ಟಿಗೆ ಇದು ಮಾತೃವಂಶೀಯವಾಗಿಯೂ ಇತ್ತು). ಥಾಯ್ಲೆಂಡ್ ಹಾಗೂ ಆಗ್ನೇಯ ಏಷ್ಯದ ಅನೇಕ ಭಾಗಗಳಲ್ಲಿ ಸಾಮಾನ್ಯವಾಗಿ, ಮಹಿಳೆಯರು ಭೂಮಿಯ ಹಕ್ಕುದಾರರು. ಗಂಡು, ಮದುವೆಯ ನಂತರ ಹೆಂಡತಿಯ ಮನೆಯಲ್ಲಿಯೇ ವಾಸವಿದ್ದು, ಆಕೆಯ ಜಮೀನಿನ ಬೇಸಾಯದಲ್ಲಿ ತೊಡಗುತ್ತಾನೆ. ಈ ಪದ್ಧತಿಯಿಂದಾಗಿ ಇಂದಿಗೂ ಅಲ್ಲಿನ ಮಹಿಳೆಯರು ಉನ್ನತ ಸ್ಥಾನಮಾನವನ್ನು ಹೊಂದಿದ್ದಾರೆ (ಸ್ಟ್ಯಾಗರ್ ಮತ್ತು ಕೆರ್ಬೊ 2000, ಪಸುಕ್ ಮತ್ತು ಬೇಕರ್ 1998).

ಕೆಲವು ಸಂದರ್ಭಗಳಲ್ಲಿ ಸ್ತ್ರೀ ಪುರುಷರು ನಿರ್ವಹಿಸುವ ಪಾತ್ರಗಳು ಮತ್ತು ಅವರ ಅಂತಸ್ತು ಸ್ತ್ರೀಯರು ನಿಭಾಯಿಸುವ ಕೆಲಸಗಳ ಸ್ವರೂಪವನ್ನಾಧರಿಸಿ ವಿಭಿನ್ನವಾಗಿರುವುದೂ ಉಂಟು. ಒಂದು ಉದಾಹರಣೆ ಎಂದರೆ, ಭಾರತದಲ್ಲಿ ಗಂಡಸರಂತೆ ಹೆಂಗಸರೂ ಕೃಷಿ ಚಟುವಟಿಕೆಗಳಲ್ಲಿ ಭಾಗಿಗಳಾಗುತ್ತಾರೆ. ಇದು ಮುಖ್ಯವಾಗಿ ಸಣ್ಣ ಹಿಡುವಳಿದಾರ ಕುಟುಂಬಗಳಲ್ಲಿ ಕಂಡುಬರುತ್ತದೆ. ಆದರೆ ಮಹಿಳೆಯರು ಮಾಡುವ ಹೆಚ್ಚಿನ ಕೆಲಸಗಳು - ಜಾನುವಾರುಗಳ ಪೋಷಣೆಯ ರೀತಿಯವು - ಹೊರ ಪ್ರಪಂಚದ ಗಮನಕ್ಕೆ ಬರುವುದಿಲ್ಲ. ಇದು ಮುಖ್ಯವಾಗಿ ಉತ್ತರ ಭಾರತದ ಗೋಧಿ ಬೆಳೆಯುವ ಪ್ರದೇಶಗಳಲ್ಲಿನ ಸಂಗತಿ. ಆದರೆ ದಕ್ಷಿಣ ಹಾಗೂ

ಪೂರ್ವ ಭಾಗಗಳಲ್ಲಿ, ಭತ್ತದ ಬೇಸಾಯ ವ್ಯಾಪಕವಾಗಿರುವಲ್ಲಿ ಮಧ್ಯಮ ಹಾಗೂ ಕೆಳವರ್ಗದ ಮಹಿಳೆಯರು ಬಹಿರಂಗವಾಗಿ ಹೊಲಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುವುದುಂಟು (ಸೆಖೋನ್ 2000). ಇದರಿಂದಾಗಿ ಇಲ್ಲಿನ ಮಹಿಳೆಯರು ಹೆಚ್ಚಿನ ಸ್ವಾಯತ್ತತೆ ಹಾಗೂ ನಮ್ಯತೆಯನ್ನು ಅನುಭವಿಸುತ್ತಾರೆ. ಅಮೆರಿಕದಲ್ಲಿ ಉದ್ಯಮಗಳು ಬೆಳೆಯುವ ಮುನ್ನ, ವಸಾಹತುಶಾಹಿ ಅವಧಿಯಲ್ಲಿ ಮಹಿಳೆಯರು ವಿವಿಧ ಬಗೆಯ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿರುತ್ತಿದ್ದರು. ಅಲ್ಲಿನ ಪುರುಷರು ಹಾಗೂ ಮಹಿಳೆಯರ ದುಡಿಮೆ ಪರಸ್ಪರಾವಲಂಬಿಯಾಗಿತ್ತು. ಬಹುತೇಕ ಕೈಗಾರಿಕಾಪೂರ್ವ ಸಮಾಜಗಳಲ್ಲಿ, ರಾಜಕೀಯ ವ್ಯವಸ್ಥೆಗಳು ಹಾಗೂ ಯುದ್ಧಗಳಿಂದಾಗಿ ಪುರುಷರು ಪಾರಮ್ಯವನ್ನು ಪಡೆಯುವಂತಾಯಿತು.

ಸಮಾಜ ಹೆಚ್ಚು ಔದ್ಯೋಗೀಕರಣಕ್ಕೆ ಒಳಗಾದಂತೆ ಮಹಿಳೆಯರ ಸ್ಥಿತಿಯು ಹೆಚ್ಚಿನ ಅವನತಿಗೀಡಾಯಿತು. ಪುರುಷರಿಗೆ ಹೋಲಿಸಿದಲ್ಲಿ ಸಾಧಾರಣ ಮಹಿಳೆಯರ ಜೀವನಮಟ್ಟ ಮತ್ತು ಅಧಿಕಾರಗಳಲ್ಲಿ ಸಾಮಾನ್ಯವಾಗಿ ಯಾವುದೇ ಸುಧಾರಣೆಯಿರಲಿಲ್ಲ. ಔದ್ಯೋಗೀಕರಣದಿಂದಾಗಿ ಗ್ರಾಮೀಣ ಜನರು ಬೃಹತ್ ನಗರಗಳಿಗೆ ವಲಸೆ ಹೋದದ್ದರಿಂದ ಅವರ ಕುಟುಂಬಗಳು ಛಿದ್ರಗೊಂಡವು. ಪರಿಣಾಮವಾಗಿ ಮಹಿಳೆಯರು ಕೆಲವೊಮ್ಮೆ ಭಿಕ್ಷುಕರಾಗಿಯೋ, ಮೈಮಾರಿಕೊಂಡೋ ಅಥವಾ ಕಾರ್ಖಾನೆಗಳಲ್ಲಿ ಅತಿ ಕಡಿಮೆ ಸಂಬಳಕ್ಕೆ ದುಡಿದೋ ಜೀವನ ನಡೆಸಬೇಕಾಗಿ ಬಂದಿತು. ಹಿಂದೆ ಭಾವಿಸಿದ್ದಕ್ಕಿಂತಲೂ ಕಡಿಮೆ ಸಂಖ್ಯೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಕಾರ್ಖಾನೆಗಳಲ್ಲಿ ಇಂಥ ಕಡಿಮೆ ಸಂಬಳದ ದುಡಿಮೆಗಾರರಾಗಿದ್ದರೆಂದು ಇತ್ತೀಚಿನ ಪ್ರಯೋಗಸಿದ್ಧ ಪುರಾವೆಗಳು ತಿಳಿಸುತ್ತವೆ. ಆದರೆ ಔದ್ಯೋಗೀಕರಣದ ಪ್ರಾರಂಭದ ಅವಧಿಯಲ್ಲಿ ಇಂಥ ಕೆಲಸಗಳಿಗಾಗಿ ಮಹಿಳೆಯರು ಹಾಗೂ ಮಕ್ಕಳೊಂದಿಗೆ ವಲಸೆ ಬಂದ ಹೊಸ ಕಾರ್ಮಿಕ ವರ್ಗವೆನಿಸಿದ ಗ್ರಾಮೀಣ ವಲಸೆಗಾರರಿಗೆ ಬೇಡಿಕೆಯಿತ್ತು. ಇದಕ್ಕೆ ಕಾರಣವೆಂದರೆ, ಅವರನ್ನು ಸುಲಭವಾಗಿ ಹತೋಟಿಯಲ್ಲಿಟ್ಟುಕೊಳ್ಳಬಹುದು ಮತ್ತು ಅವರು ವೇತನದ ಹೆಚ್ಚಳಕ್ಕಾಗಲಿ, ಕೆಲಸದ ಜಾಗದಲ್ಲಿ ಉತ್ತಮ ವಾತಾವರಣಕ್ಕಾಗಲಿ ಆಗ್ರಹಿಸುವ ಸಂಭವವಿರಲಿಲ್ಲ. ನ್ಯೂಯಾರ್ಕ್‌ನ ಉಡುಪಿನ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದ ವಲಸಿಗ ಮಹಿಳೆಯರ ಪರಿಸ್ಥಿತಿಯ ಬಗ್ಗೆ ಇರ್ವಿಂಗ್ ಹೋ (1976) ಎಲ್ಲ ವಿವರಗಳನ್ನೂ ಒದಗಿಸಿದ್ದಾರೆ. ಹೆಂಗಸರು ಹಾಗೂ ಮಕ್ಕಳು ದುಡಿಯುವ ಜಾಗಗಳು ಕಿಕ್ಕಿರಿದಿದ್ದು, ಅಪಾಯಕಾರಿಯಾಗಿದ್ದ ಚಿಕ್ಕ ಕಾರ್ಖಾನೆಗಳಲ್ಲಿ ಇವರನ್ನು ಅನೇಕ ಗಂಟೆಗಳ ಕಾಲ ಕೆಲಸಮಾಡುವಂತೆ ಪ್ರತಿದಿನವೂ ಒತ್ತಾಯಿಸಲಾಗುತ್ತಿತ್ತು. ಕೆಲಸದಿಂದ ದೊರೆಯುವ ವಿರಾಮವು ಕಡಿಮೆಯಿದ್ದು, ಉಸಿರಾಟಕ್ಕೆ ಶುಭ್ರಗಾಳಿಯಾಗಲಿ ಅಥವಾ ಆರೋಗ್ಯಕರ ವಿಶ್ರಾಂತಿ ಕೊಠಡಿಗಳಾಗಲಿ ಇರಲಿಲ್ಲ. ಇಂಥ ಅಸುರಕ್ಷಿತ ಪರಿಸ್ಥಿತಿಗಳಿಂದಾಗಿ ಅನೇಕ ಸಾವು ನೋವುಗಳು ಸಂಭವಿಸಿದವು. 1911ರಲ್ಲಿ ನ್ಯೂಯಾರ್ಕ್‌ನ ಟ್ರಯಾಂಗಲ್ ಷರ್ಟ್ ಎಂಬ ಕಾರ್ಖಾನೆಯಲ್ಲಿ ನಡೆದ ಬೆಂಕಿ ಅಪಘಾತದಲ್ಲಿ 146 ಜನ ಯುವತಿಯರು ನಿಮಿಷಮಾತ್ರದಲ್ಲಿ ಸುಟ್ಟುಕರಕಲಾದರು. ತ್ವರಿತ ಔದ್ಯೋಗೀಕರಣಕ್ಕೆ ಒಳಗಾಗುತ್ತಿರುವ ದೇಶಗಳಲ್ಲಿ ಇಂದಿಗೂ ಇಂಥ ಪರಿಸ್ಥಿತಿಗಳು ಕಂಡುಬರುತ್ತವೆ. ಮಹಿಳೆಯರು ಉತ್ತಮ ಸ್ಥಾನದಲ್ಲಿರುವ ಥಾಯ್ಲೆಂಡ್‌ನಲ್ಲಿ, ರೈತಾಪಿ ಬಡ ಹೆಣ್ಣುಮಕ್ಕಳು ಅದರಲ್ಲೂ ವಿಶೇಷವಾಗಿ ಈಶಾನ್ಯ ಭಾಗದ ಹುಡುಗಿಯರು ಬ್ಯಾಂಕಾಕ್‌ನಲ್ಲಿ ಕಿಕ್ಕಿರಿದಿದ್ದು, ಅವರ ಮುಗ್ಧತೆ ಹಾಗೂ ಅಲ್ಪ ವೇತನದ ದುಡಿತವನ್ನು ಶೋಷಿಸಲಾಗುತ್ತಿದೆ. ಟ್ರಯಾಂಗಲ್ ಷರ್ಟ್ ಕಾರ್ಖಾನೆಯ ಬೆಂಕಿಯ ಅವಘಢದಂತಹ ಘಟನೆಗಳು ಮರುಕಳಿಸುತ್ತಿದ್ದು, 1993ರಲ್ಲಿ ಬ್ಯಾಂಕಾಕ್‌ನ ಒಂದು ಗೊಂಬೆ ಕಾರ್ಖಾನೆಯಲ್ಲಿ ನಡೆದ ಬೆಂಕಿ ಅನಾಹುತದಲ್ಲಿ ಅನೇಕ ಯುವ ಮಹಿಳೆಯರು ಜೀವಂತ ಬೂದಿಯಾದರು. ಈಗಾಗಲೇ ಗಮನಿಸಿದಂತೆ, ಜಗತ್ತಿನಾದ್ಯಂತ ಮಹಿಳೆಯರು ದುಡಿಯುವ ಕಾರ್ಖಾನೆಗಳಲ್ಲಿ ಅತ್ಯಂತ ನಿಕೃಷ್ಟ ಮತ್ತು ಅಸುರಕ್ಷಿತ ವಾತಾವರಣವಿದ್ದು, ಅವರು ಎಲ್ಲ ಹಕ್ಕುಗಳಿಂದ ವಂಚಿತರಾಗಿದ್ದಾರೆ.

ಆದರೆ ಔದ್ಯಮಿಕವಾಗಿ ಅಭಿವೃದ್ಧಿ ಕಂಡ ಸಮಾಜಗಳಲ್ಲಿ ಮಹಿಳೆಯರ ಸ್ಥಿತಿ ಬದಲಾಗುತ್ತಿದೆ. ಇಂದಿಗೂ ಸ್ತ್ರೀ ಪುರುಷರ ನಡುವೆ ಅನೇಕ ರೀತಿಯ ಅಸಮಾನತೆಯಿದೆ. ನಾವು ನೋಡಿರುವಂತೆ, ಮುಂದುವರಿದ ಔದ್ಯಮಿಕ ಸಮಾಜಗಳಲ್ಲಿ ಈ ಅಸಮಾನತೆಗಳು ಹೆಚ್ಚು ವಿಭಿನ್ನವಾಗಿವೆ. ಆದರೆ ಔದ್ಯಮೀಕರಣಪೂರ್ವ ಸಮಾಜಗಳಿಗೆ ಹೋಲಿಸಿದಲ್ಲಿ ಮುಂದುವರಿದ ಔದ್ಯಮಿಕ ಸಮಾಜಗಳಲ್ಲಿ ಲಿಂಗಾಧಾರಿತ ಅಸಮಾನತೆ ಕಡಿಮೆಯಿದೆ. ಈ ಕುರಿತ ಕೆಲವು ಉದಾಹರಣೆಗಳು ಹೀಗಿವೆ: ಇಂದಿನ ಮಹಿಳೆಯರಿಗೆ ಲಭ್ಯವಿರುವ ಸಾರ್ವಜನಿಕ ಸ್ಥಳವು ಅವರ ಮುತ್ತಜ್ಜಿಯರಿಗೆ ಲಭ್ಯವಿರಲಿಲ್ಲ. ಮಹಿಳೆಯರ ಮತ ಚಲಾವಣೆಯ

ಹಾಗೂ ಕಛೇರಿಗಳಲ್ಲಿ ಉದ್ಯೋಗಮಾಡುವ ಹಕ್ಕು ಎಲ್ಲ ಮುಂದುವರಿದ ಔದ್ಯಮಿಕ ಸಮಾಜಗಳಲ್ಲಿಯೂ ಕಂಡುಬರುತ್ತದೆ; ಕಾರ್ಮಿಕರ ಕಾನೂನುಗಳು, ಕೆಲಸಮಾಡುವ ಸ್ಥಳಗಳಲ್ಲಿ ಮಹಿಳೆಯರಿಗೆ ಉಪಯುಕ್ತವೆನಿಸಿವೆ; ಅವರು ಈಗ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಬಹುದು; ವಿವಾಹ ವಿಚ್ಛೇದನದಲ್ಲಿ ಹಾಗೂ ಸಾಮಾನ್ಯವಾಗಿ ಕಾನೂನು ವ್ಯವಸ್ಥೆಯಲ್ಲಿ ಅವರಿಗೆ ಹೆಚ್ಚಿನ ಹಕ್ಕುಗಳಿವೆ; ಅನೇಕ ಉದ್ಯೋಗಗಳಲ್ಲಿ ಮಹಿಳೆಯರ ಪ್ರಾತಿನಿಧ್ಯವು ನಿಸ್ಸಂದೇಹವಾಗಿ ಕಡಿಮೆಯಿದ್ದಾಗ್ಯೂ, ಅವರನ್ನು ನಿರ್ದಿಷ್ಟ ಕೆಲಸಗಳಿಗೆ ನಿರ್ಬಂಧಿಸಿರುವುದಿಲ್ಲ. ಕೆಲವು ಅಸಮಾನತೆಗಳು ಉಳಿದಿವೆ ಅಥವಾ ಸಮಾನತೆಯನ್ನು ನಾವು ಸಮೀಪಿಸುತ್ತಿದ್ದೇವೆ ಎಂಬುದು ಈ ಎಲ್ಲ ವಿವರಣೆಗಳ ಸೂಚ್ಯಾರ್ಥವಲ್ಲ. ಲಿಂಗಾಧಾರಿತ ಅಸಮಾನತೆಯನ್ನು ಚಾರಿತ್ರಿಕ ದೃಷ್ಟಿಕೋನದಲ್ಲಿ ಬಿಂಬಿಸಿ, ಘಟಿಸಿದ ಬದಲಾವಣೆಗಳನ್ನು ಗುರುತಿಸುವುದು ಇದರ ಉದ್ದೇಶ.

ಮಹಿಳೆಯರ ಸ್ಥಿತಿಯಲ್ಲಿನ ಸುಧಾರಣೆಗೆ ಮುಖ್ಯ ಕಾರಣ ಸ್ತ್ರೀ ಪುರುಷರಿಬ್ಬರಲ್ಲಿಯೂ ಕಂಡುಬಂದಿರುವ ಮನೋಧರ್ಮಗಳಲ್ಲಿನ ಬದಲಾವಣೆ. ಒಂದು ನಿದರ್ಶನವನ್ನು ನೋಡಬಹುದು: 1938ರಲ್ಲಿ ಅಮೆರಿಕದ ಜನಸಂಖ್ಯೆಯ ಶೇಕಡ 20ರಷ್ಟು ಜನ ಮಾತ್ರ ಮದುವೆಯ ನಂತರ ಮಹಿಳೆಯರು ಮನೆಯ ಹೊರಗೆ ದುಡಿಯುವುದನ್ನು ಒಪ್ಪುತ್ತಿದ್ದರು. ಆದರೆ 1980ರ ದಶಕದ ಹೊತ್ತಿಗೆ ಇವರ ಸಂಖ್ಯೆ ಶೇಕಡ 80ನ್ನು ತಲುಪಿತು. ಮನೋಧರ್ಮದಲ್ಲಿನ ಈ ಬದಲಾವಣೆಯ ಹಿಂದೆ ಹಲವು ಬೆಳವಣಿಗೆಗಳನ್ನು ಗುರುತಿಸಬೇಕಿದೆ. ಯಾವುದೇ ಅಲ್ಪಸಂಖ್ಯಾತರ ಗುಂಪಿನ ಸುಧಾರಿತ ಸ್ಥಿತಿಗತಿಯಂತೆಯೇ, ಮಹಿಳೆಯರ ಸುಧಾರಿತ ಪರಿಸ್ಥಿತಿಗೂ ಸಮಾಜದಲ್ಲಿನ ಮೂಲಭೂತ ಸ್ವರೂಪದ ಅಂತರ್ನಿಹಿತ (underlying) ಬದಲಾವಣೆಗಳಿಗೂ ಸಂಬಂಧವಿರುವುದನ್ನು ಗಮನಿಸಬೇಕು. ಮಾನವ ಸಮಾಜದಲ್ಲಿನ ಇತರ ಬಗೆಯ ಸಮಾನತೆಗಳ ಚರಿತ್ರೆಯ ಸಂದರ್ಭದಲ್ಲಿ ನಾವು ಈಗಾಗಲೇ ನೋಡಿರುವಂತೆ, ಕೇವಲ ಸಮಾಜದ ಪ್ರಬಲ ಸಮುದಾಯದಲ್ಲಿ ಹಠಾತ್ತನೆ ಉಂಟಾಗುವ ಹೃದಯ ಪರಿವರ್ತನೆಯು ಸುಧಾರಣೆಗಳಿಗೆ ಕಾರಣವಾಗಿರುವುದಿಲ್ಲ. ಅಭಿವೃದ್ಧಿ ಹೊಂದಿದ ಔದ್ಯಮಿಕ ಸಮಾಜಗಳ ಮಹಿಳೆಯರ ಸುಧಾರಿತ ಸ್ಥಾನಮಾನ ಹಾಗೂ ಇನ್ನೂ ಚಾಲ್ತಿಗೆ ಬರಬೇಕಿರುವ ಸುಧಾರಣೆಗಳು ಮೂಲಭೂತ ಆರ್ಥಿಕ, ರಾಜಕೀಯ ಸ್ಥಿತ್ಯಂತರಗಳು ಮತ್ತು ಮಹಿಳಾ ಹೋರಾಟಗಳ ಶ್ರಮಕ್ಕೆ ಸಂಬದ್ಧವಾಗಿವೆ.

ಮಹಿಳೆಯರ ಪರಿಸ್ಥಿತಿಗಳಿಗೆ ನೆರವಾದ ಆರ್ಥಿಕ ಬದಲಾವಣೆಗಳು ಕೆಲವು ಸಂದರ್ಭಗಳಲ್ಲಿ ಸ್ಪಷ್ಟವಾಗಿಯೇ ಗೋಚರವಾಗುತ್ತವೆ. ದೈಹಿಕ ಶ್ರಮವನ್ನು ಬೇಡುವ ಕೆಲಸಗಳಲ್ಲಿ ಮಹಿಳೆಯರು ಕೆಲವೊಮ್ಮೆ ಪುರುಷರ ಜೊತೆ ಸ್ಪರ್ಧಿಸಲಾಗದಿರಬಹುದು. ಈ ಹಿಂದೆ, ಇಲ್ಲಿಯೂ ಮಹಿಳೆಯರ ಸಾಮರ್ಥ್ಯಗಳನ್ನು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಅಂದಾಜಿಸಲಾಗಿದೆ. ಈಗೀಗ ದೈಹಿಕ ಶಕ್ತಿಗಿಂತಲೂ ಬೌದ್ಧಿಕ ಸಾಮರ್ಥ್ಯ ಹಾಗೂ ಕೌಶಲಗಳ ಅವಶ್ಯಕತೆಯುಳ್ಳ ಬಹುಸಂಖ್ಯಾತ ಉದ್ಯೋಗಗಳಿಂದಾಗಿ, ಲಿಂಗಾಧಾರಿತ ಅಡೆತಡೆಗಳನ್ನು ತೆಗೆದುಹಾಕಿದಾಗ ಕೆಲವೊಮ್ಮೆ ಮಹಿಳೆಯರಿಗೆ ಅನುಕೂಲವಾಗುತ್ತದೆ. ಮುಖ್ಯವಾಗಿ, ವೃತ್ತಿಗಳು, ವಿಜ್ಞಾನ, ಆಡಳಿತ ಮುಂತಾದ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಮಾನದ ಹುದ್ದೆಗಳಿಗೆ ಬೇಕಾದ ಎಲ್ಲ ಅರ್ಹತೆಯನ್ನೂ ಇಂದಿನ ಸ್ತ್ರೀಯರು ಪಡೆದಿದ್ದಾರೆ.

ಮಹಿಳೆಯರ ಆರ್ಥಿಕ ಅವಕಾಶಗಳು ಸುಧಾರಿಸಿದಾಗ ಹೆಚ್ಚು ಪ್ರತ್ಯಕ್ಷವಲ್ಲದ ಬದಲಾವಣೆಗಳುಂಟಾಗುತ್ತವೆ. ಮಹಿಳೆಯರ ಅವಲಂಬನೆಯು ಅತ್ಯಂತ ಮುಖ್ಯವಾದ ಅಂಶಗಳಲ್ಲೊಂದು. ಇದಕ್ಕೂ ಹಿಂದೆ, ಮಹಿಳೆಯರು ಆರ್ಥಿಕ ಭದ್ರತೆಗಾಗಿ ಮತ್ತೆ ಮತ್ತೆ ಪುರುಷರನ್ನೇ ಅವಲಂಬಿಸುತ್ತಿದ್ದರು. ಇಂದು ಅವರು ಸ್ವತಃ ಕಾರ್ಮಿಕ ಬಲವನ್ನು ಪ್ರವೇಶಿಸುವ ಸಾಮರ್ಥ್ಯದೊಂದಿಗೆ ಪ್ರಮುಖವಾದ ಸ್ವಾತಂತ್ರ್ಯ ಅಥವಾ ಆಯ್ಕೆಯನ್ನು ಪಡೆದಿದ್ದಾರೆ. ಅಗತ್ಯವಿದ್ದಲ್ಲಿ ಅಥವಾ ಇಚ್ಛೆಪಟ್ಟಲ್ಲಿ, ಮಹಿಳೆಯರು ಗಂಡಸರ ನೆರವಿಲ್ಲದೆ ಸ್ವತಂತ್ರವಾಗಿ ಬಾಳಬಲ್ಲರು. ಇದರಿಂದಾಗಿ ಕ್ರಮೇಣ ಗಂಡಸರ ಆಲೋಚನೆ ಮತ್ತು ವರ್ತನೆಯಲ್ಲಿಯೂ ಸಾಮಾನ್ಯತಃ ಹೊಂದಾಣಿಕೆಗಳು ಮೂಡಿವೆ. ಮತ್ತೊಂದು ಕಡೆಗಣಿಸಲ್ಪಟ್ಟ ತಾಂತ್ರಿಕ ಬದಲಾವಣೆಯು, ಮುಂದುವರಿದ ಔದ್ಯೋಗಿಕ ಸಮಾಜಗಳಲ್ಲಿನ ಸಂತಾನೋತ್ಪತ್ತಿಯ ನಿಯಂತ್ರಣವನ್ನು ಕುರಿತ ಮಹಿಳೆಯರ ಪರಿಸ್ಥಿತಿಯಲ್ಲಿನ ಸುಧಾರಣೆಯಲ್ಲಿ ಅಂತರ್ನಿಹಿತವಾಗಿದೆ. ಹಿಂದೆ ಮಹಿಳೆಯರು ಸಾಮಾನ್ಯವಾಗಿ, ತಮ್ಮ ಇಳಿವಯಸ್ಸಿನವರೆಗೂ ಅವಲಂಬಿತ ಮಕ್ಕಳನ್ನು ಹೊಂದಿದ್ದು, ಇಂದಿನ ಆಧುನಿಕ ಸಮಾಜದಲ್ಲಿ ಕಂಡುಬರುವುದಕ್ಕಿಂತಲೂ ಹೆಚ್ಚಿನ ಮಕ್ಕಳನ್ನು ಹೆರುತ್ತಿದ್ದರು. ಈ ಬಹುತೇಕ

ಮಕ್ಕಳು ಪ್ರೌಢರಾಗುವ ಮೊದಲೇ ಸಾವಿಗೀಡಾಗುತ್ತಿದ್ದಾಗ್ಯೂ, ಅವರ ಉಪಸ್ಥಿತಿಯು, ಮಹಿಳೆಯರಿಗೆ ಉದ್ಯೋಗಗಳು ಲಭ್ಯವಿದ್ದಾಗಲೂ ಸಹ ಅವರು ಶ್ರಮಿಕ ಬಲವನ್ನು ಪ್ರವೇಶಿಸಲು ಹೆಚ್ಚಿನ ಬಿಡುವು ದೊರೆಯುತ್ತಿರಲಿಲ್ಲವೆಂಬುದನ್ನು ಧ್ವನಿಸುತ್ತದೆ. ಜನನ ನಿಯಂತ್ರಣದ ಆವಿಷ್ಕಾರದಿಂದಾಗಿ ಮಕ್ಕಳ ಸಂಖ್ಯೆಯನ್ನು ನಿಯಂತ್ರಿಸುವ ಸ್ವಾತಂತ್ರ್ಯವು ದೊರೆತಿದ್ದು, ಅವರು ಶೈಕ್ಷಣಿಕ ಮತ್ತು ವೃತ್ತಿಪರ ಸಾಧನೆಯತ್ತ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಬಹುದಾಗಿದೆ.

ಇದೆಲ್ಲದರ ಅರ್ಥ, ಕೆಲವು ಲಿಂಗಾಧಾರಿತ ಅಸಮಾನತೆ ಉಳಿದುಕೊಂಡಿದೆಯೆಂದಲ್ಲ. ಸಮಾಜಗಳ ನಡುವೆ ಹಾಗೂ ಆಂತರಿಕವಾಗಿ ಸ್ತ್ರೀಯರ ಸ್ಥಾನಮಾನವು ಪುರುಷರಿಗೆ ಹೋಲಿಸಿದಾಗ ವಿಭಿನ್ನವಾಗಿದೆ. ವರ್ಗ ಹಾಗೂ ಜನಾಂಗ ಸಂಬಂಧೀ ಅಂಶಗಳು, ಔದ್ಯೋಗಿಕ ಮತ್ತು ತಾಂತ್ರಿಕ ಬೆಳವಣಿಗೆಯ ವಿವಿಧ ಹಂತಗಳು ಈ ವ್ಯತ್ಯಾಸಗಳಿಗೆ ದಾರಿಮಾಡಿಕೊಟ್ಟಿವೆ. ಅಲ್ಲದೆ, ಈ ವಿಭಿನ್ನತೆಗಳು; ವಾಣಿಜ್ಯ ವ್ಯಾಪಾರ ಹಾಗೂ ಔದ್ಯೋಗಿಕ ಉತ್ಪನ್ನಗಳ ಜೊತೆಗೆ, ಅನೇಕ ಸಮಾಜಗಳಲ್ಲಿನ ಜೀವನೋಪಾಯದ ಹಾಗೂ ಅರೆ-ಜೀವನೋಪಾಯದ ಆರ್ಥಿಕತೆಗಳ ಏಕಕಾಲಿಕ (simultaneous) ಸಹ-ಅಸ್ತಿತ್ವದೊಂದಿಗೆ (co-existence) ಸಂಬಂಧವನ್ನು ಹೊಂದಿವೆ. ಲಿಂಗಾಧಾರಿತ ಅಸಮಾನತೆ ಹೇಗೆ ಅಸ್ತಿತ್ವಕ್ಕೆ ಬಂದಿತು ಮತ್ತು ಹೇಗೆ ವಿವಿಧ ಹಂತಗಳನ್ನು ದಾಟಿದೆ ಎಂಬುದನ್ನು ತಿಳಿಯಬೇಕಾದರೆ ನಾವು ನಡೆದು ಬಂದ ಮತ್ತು ಮುಂದೆ ನಡೆಯುವ ದಾರಿಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯ..

## ಲಿಂಗಾಧಾರಿತ ಶ್ರೇಣೀಕರಣದ ಸಿದ್ಧಾಂತಗಳು:

ಲಿಂಗಾಧಾರಿತ ಅಸಮಾನತೆಯ ಸಿದ್ಧಾಂತಗಳು, ಈ ಅಧ್ಯಾಯದಲ್ಲಿ ನಾವು ಪರಿಗಣಿಸಿರುವ ಅಸಮಾನತೆಗಳ ಕಾರಣಗಳನ್ನು ವಿವರಿಸಲು ಪ್ರಯತ್ನಿಸುವುದು ಮಾತ್ರವಲ್ಲದೆ, ಸಮಾನತಾವಾದಿ ಲಿಂಗಾಧಾರಿತ ಸಂಬಂಧಗಳನ್ನು ಕುರಿತ ನೋಟಗಳನ್ನು ಸಹ ಒದಗಿಸುವುದರಿಂದ ಅವನ್ನು ವಿವರವಾಗಿ ಗಮನಿಸುವುದು ಉಪಯುಕ್ತವಾಗಿದೆ. ಅಮೆರಿಕ ಹಾಗೂ ಇತರ ಕಡೆಗಳಲ್ಲಿ ಮಹಿಳಾ ಚಳವಳಿಗಳ ಪ್ರಮುಖ ಅಂಶಗಳಿಗೆ ಚೌಕಟ್ಟೊಂದನ್ನು ಅವು ಒದಗಿಸುವುದರಿಂದಲೂ ಸಹ ಅವುಗಳ ಬಗೆಗಿನ ತಿಳುವಳಿಕೆ ಅಗತ್ಯ.

ಮುಂದಿನ ಅಧ್ಯಾಯದಲ್ಲಿ ಜನಾಂಗೀಯ ಸಂಬಂಧಿ ಅಸಮಾನತೆಗಳ ಕುರಿತಾದ ವಿಶ್ಲೇಷಣೆಯನ್ನು ಮಾಡಲಿದ್ದೇವೆ. ಲಿಂಗಾಧಾರಿತ ಅಸಮಾನತೆ ಹಾಗೂ ತಾರತಮ್ಯಗಳಿಗೆ ಸಂಬಂಧಿಸಿದಂತೆಯೂ ಹಲವು ರೀತಿಯ ಸಿದ್ಧಾಂತಗಳು ಲಭ್ಯವಿವೆ. ಇತ್ತೀಚಿನ ದಿನಗಳಲ್ಲಿ ಸ್ತ್ರೀವಾದಿ ಸಮಾಜಶಾಸ್ತ್ರ ಹಾಗೂ ಸ್ತ್ರೀವಾದಿ ಸಿದ್ಧಾಂತಗಳ ಕ್ಷೇತ್ರಗಳಲ್ಲಿ ಹೊಸ ಚಿಂತನೆಗಳು ಕಾರ್ಯತಃ ಸ್ಫೋಟದೋಪಾದಿಯಲ್ಲಿ ಪ್ರಸ್ತುತಗೊಳ್ಳುತ್ತಿವೆ (ಉದಾ: ಛೇಫೆಜ್ 1988, 1990; ನೀಲ್‌ಸನ್ 1990; ಕೊನೆಲ್ 1987). ಅವುಗಳಲ್ಲಿ ಕೇವಲ ಕೆಲವು ಸಿದ್ಧಾಂತಗಳನ್ನು, ಅದರಲ್ಲೂ ವಿಶೇಷವಾಗಿ ಈ ಕ್ಷೇತ್ರದಲ್ಲಿ ಹೆಚ್ಚಿನ ಮಾನ್ಯತೆ ಪಡೆದ ಹಾಗೂ ಈ ಪುಸ್ತಕದಾದ್ಯಂತ ನಾವು ತೆಗೆದುಕೊಂಡಿರುವ ಸಾರ್ವಲೌಕಿಕ (general) ಸೈದ್ಧಾಂತಿಕ ದೃಷ್ಟಿಕೋನಕ್ಕೆ ಹೊಂದುವಂಥ ಸಿದ್ಧಾಂತಗಳನ್ನು ಮಾತ್ರ ಇಲ್ಲಿ ಪರಿಗಣಿಸಲಾಗುತ್ತದೆ. ಹೆಚ್ಚಿನ ಮನ್ನಣೆ ಪಡೆದ ಕೆಲವು ಸಿದ್ಧಾಂತಗಳು ಮತ್ತು ಈ ಪುಸ್ತಕದ ಸೈದ್ಧಾಂತಿಕ ದೃಷ್ಟಿಕೋನಕ್ಕೆ ಹೊಂದುವ ಸಿದ್ಧಾಂತಗಳು ಗಮನಾರ್ಹವಾಗಿ ಪರಸ್ಪರ ವ್ಯಾಪ್ತಗೊಂಡಿವೆ. ಆದರೆ ಮೊದಲಿಗೆ ಈ ಸಿದ್ಧಾಂತಗಳ ವೈವಿಧ್ಯತೆಯನ್ನು ಸಂಕ್ಷಿಪ್ತವಾಗಿ ಗಮನಿಸುವುದು ಸೂಕ್ತ.

ಲೆಂಗರ್ಮನ್ ಮತ್ತು ನೀಬ್ರುಗೆ-ಬ್ರಾಂಟ್ಲೆ (1992) ಹಾಗೂ ಆಂಡರ್ಸನ್ ( 1997 : 317-381) ಅವರುಗಳು ತಮ್ಮ ಅಧ್ಯಯನದಲ್ಲಿ ಲಿಂಗಾಧಾರಿತ ಅಸಮಾನತೆಗಳ ಬಗೆಗಿನ ಸಿದ್ಧಾಂತಗಳನ್ನು ಮೂರು ವಿಧಗಳಾಗಿ ವರ್ಗೀಕರಿಸುತ್ತಾರೆ: ಅವೆಂದರೆ, ಭಿನ್ನತೆಯ ಸಿದ್ಧಾಂತಗಳು, ಅಸಮಾನತೆಯ ಸಿದ್ಧಾಂತಗಳು ಮತ್ತು ದಬ್ಬಾಳಿಕೆಯ ಸಿದ್ಧಾಂತಗಳು. ಮೊದಲನೆಯ ಗುಂಪಿನ ಸಿದ್ಧಾಂತಗಳು ಬಹುತೇಕ ಸಂದರ್ಭಗಳಲ್ಲಿ ಮಹಿಳೆಯರ ನೆಲೆ ಹಾಗೂ ಅನುಭವವು, ಪುರುಷರ ನೆಲೆ ಹಾಗೂ ಅನುಭವಕ್ಕಿಂತಲೂ ವಿಭಿನ್ನವಾಗಿರುತ್ತದೆಂಬ ಅಂಶಕ್ಕೆ ಒತ್ತು ನೀಡುತ್ತವೆ. ಈ ಸಿದ್ಧಾಂತಗಳು ಜೈವಿಕ-ಸಾಮಾಜಿಕ ವಿವರಣೆಗಳು, ವ್ಯವಸ್ಥಾತ್ಮಕ ಅಥವಾ ಸಮಾಜೋ ಮನೋವೈಜ್ಞಾನಿಕ ವಿವರಣೆಗಳನ್ನು ಒಳಗೊಂಡಿರಬಹುದು. ಎರಡನೆಯ ಬಗೆಯ, ಅಸಮಾನತೆಯನ್ನು ಕೇಂದ್ರವಾಗಿಟ್ಟುಕೊಳ್ಳುವ ಸಿದ್ಧಾಂತಗಳು, ಬಹುತೇಕ ಸಂದರ್ಭಗಳಲ್ಲಿನ ಮಹಿಳೆಯರ ನೆಲೆಯು ಪರುಷರ ಸ್ಥಿತಿಗಿಂತ

ಭಿನ್ನವಾಗಿರುವುದೇ ಅಲ್ಲದೆ, ಅದಕ್ಕಿಂತ ಕೆಳಮಟ್ಟದ್ದೂ ಅಥವಾ ಅಸಮಾನವಾದುದೂ ಆಗಿರುತ್ತದೆ ಎನ್ನುವ ಅಂಶಕ್ಕೆ ಒತ್ತು ನೀಡುತ್ತವೆ. ಇದೇ ಭಾಗದಲ್ಲಿ ನಾವು ನೋಡಲಿರುವಂತೆ, ಈ ಸಿದ್ಧಾಂತಗಳು ಅಸಮಾನತೆಯ ಉದಾರವಾದಿ ಸ್ತ್ರೀವಾದಿ ವಿವರಣೆಗಳಿಂದ ಮೊದಲುಗೊಂಡು ಮಾರ್ಕ್ಸ್‌ವಾದಿ ವಿವರಣೆಗಳವರೆಗೂ ಹರಡಿಕೊಂಡಿವೆ. ಮಹಿಳೆಯರ ಪರಿಸ್ಥಿತಿಯು ಪುರುಷರಿಗಿಂತ ಭಿನ್ನವಾಗಿದ್ದು, ಅಸಮಾನತೆಯಿಂದ ಕೂಡಿದೆಯಷ್ಟೇ ಅಲ್ಲದೆ, ಅವರು ದಮನಕ್ಕೂ ಒಳಗಾಗಿದ್ದಾರೆ, ಅಧೀನಕ್ಕೊಳಗಾಗಿರುವ ಇವರನ್ನು ಸಕ್ರಿಯವಾಗಿ ನಿಗ್ರಹಿಸಲಾಗಿದ್ದು, ನಿರ್ದಿಷ್ಟ ರೀತಿಯಲ್ಲಿ ರೂಪಿಸಲಾಗಿದೆ (moulded), ಪುರುಷರು ಮಹಿಳೆಯರನ್ನು ಉಪಯೋಗಿಸಿಕೊಳ್ಳುವುದೇ ಅಲ್ಲದೆ, ದುರುಪಯೋಗಪಡಿಸಿಕೊಂಡಿದ್ದಾರೆ ಎಂಬ ಅಂಶಗಳಿಗೆ ದಬ್ಬಾಳಿಕೆ ಸಿದ್ಧಾಂತವು ಒತ್ತು ನೀಡುತ್ತದೆ (ಲೆಂಗರ್ಮನ್ ಮತ್ತು ನೀಬ್ರುಗ್ಗೆ - ಬ್ರಾಂಟ್ಲೆ 1992:458). ದಮನದ ಬಗೆಗಿನ ಈ ಸಿದ್ಧಾಂತಗಳು ಮನೋವಿಶ್ಲೇಷಣೆ ಮತ್ತು ಉಗ್ರ ಸುಧಾರವಾದಿ ಸ್ತ್ರೀವಾದ/ಸಮಾಜವಾದದಿಂದ ಹಿಡಿದು ತೀವ್ರ "ಮೂರನೆಯ ಅಲೆಯ ಸ್ತ್ರೀವಾದಿ ಸಿದ್ಧಾಂತಗಳವರೆಗೂ" ವಿಸ್ತೃತಗೊಂಡಿವೆ. ಎರಡನೆಯ ಗುಂಪಿನ ಸಿದ್ಧಾಂತಗಳು ಅದರ ಹೆಸರೇ ಸೂಚಿಸುವಂತೆ, ನಮ್ಮ ವಿಷಯ ವಸ್ತುವಿಗೆ ಅತ್ಯಂತ ಉಪಯುಕ್ತವೆನಿಸಿವೆ. ಲಿಂಗಾಧಾರಿತ ದಬ್ಬಾಳಿಕೆಯ ಸಿದ್ಧಾಂತಗಳಂತಹ ಇತರೆ ಸಿದ್ಧಾಂತಗಳು ಸ್ಪಷ್ಟ ರಾಜಕೀಯ ಲೇಪನವನ್ನು ಹೊಂದಿದ್ದು, ಲಿಂಗಾಧಾರಿತ ಅಸಮಾನತೆಗಳ ಸಕ್ರಿಯ ನಿರ್ವಹಣೆಯತ್ತ ಗಮನವನ್ನು ಕೇಂದ್ರೀಕರಿಸಿವೆ. ಹೀಗಾಗಿ, ಅವು ಲಿಂಗಾಧಾರಿತ ಶ್ರೇಣೀಕರಣವನ್ನು ಹೇಗೆ ನಿರ್ವಹಿಸಲಾಗುತ್ತದೆ ಎಂಬುದನ್ನು ಪರಿಗಣಿಸುವಲ್ಲಿ ನಿಶ್ಚಿತವಾಗಿಯೂ ಮೌಲ್ಯಯುತವಾಗಿವೆ.

ಸ್ತ್ರೀವಾದಿ ಸಿದ್ಧಾಂತಗಳ ಮತ್ತೊಂದು ಸಮೀಕ್ಷೆಯಲ್ಲಿ ನೀಲ್‌ಸನ್ (1990) ಅವುಗಳನ್ನು ಜೀವಶಾಸ್ತ್ರ, ಸಾಮಾಜಿಕ ಕಲಿಕೆ, ಸಾಮಾಜಿಕ ಸಂರಚನೆ ಮತ್ತು ಸಮಾಜದಲ್ಲಿನ ಭೌತಿಕ ಸ್ಥಿತಿಗಳತ್ತ ಗಮನವನ್ನು ಕೇಂದ್ರೀಕರಿಸುವ ಗುಂಪಿನೊಂದಿಗೆ ಏಕತ್ರಿತಗೊಳಿಸುತ್ತಾನೆ. ಇತಿಹಾಸದ ವಿಸ್ತೃತ ಚಲನೆಯನ್ನು ಮತ್ತು ಶ್ರೇಣೀಕರಣ ವ್ಯವಸ್ಥೆಯಲ್ಲಿನ ಮಹಿಳೆಯರ ಸ್ಥಾನವನ್ನು ವಿವರಿಸುವಲ್ಲಿ, ಭೌತವಾದಿ ಸಿದ್ಧಾಂತಗಳಿಗೆ ಇಲ್ಲಿ ಒಲವು ತೋರಲಾಗಿದೆ. ಆದರೆ ಇತರೆ ಅಂಶಗಳ ಸಂಯೋಜನೆಗಳು ನಮ್ಮ ವಿಷಯ ವಸ್ತುವಿಗೆ ಉಪಯುಕ್ತವೆನಿಸಿವೆ. ಜೀವಶಾಸ್ತ್ರೀಯ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಪ್ರಮುಖವಾದ ಜೈವಿಕ ವ್ಯತ್ಯಾಸಗಳಿವೆಯೆಂಬುದನ್ನಷ್ಟೇ ನಾವು ಗಮನಿಸುತ್ತೇವೆ. ಬಹುತೇಕವಾಗಿ ಪ್ರತಿದಿನವೂ ಮಿದುಳನ್ನು ಕುರಿತ ಹೊಸ ಅಂಶಗಳನ್ನು ತಿಳಿಸಲಾಗುತ್ತಿದೆ. ಆದಾಗ್ಯೂ, ಆಧುನಿಕ ಸಮಾಜಗಳಲ್ಲಿನ ಲಿಂಗಾಧಾರಿತ ಶ್ರೇಣೀಕರಣದ ನಮ್ಮ ವಿಷಯ ವಸ್ತುವಿಗೆ ಈ ಸಿದ್ಧಾಂತಗಳ ಮತ್ತು ಪ್ರಯೋಗಸಿದ್ಧ ವಿಚಾರಣಾ ಫಲಿತಗಳ (findings) ಉಪಯುಕ್ತತೆಯು ಪ್ರಶ್ನಾರ್ಹ. ಈ ಹೇಳಿಕೆಯನ್ನು ಮಾನವ ಸಮಾಜದ ವಿಕಾಸವನ್ನು ವಿವೇಚಿಸುವಾಗ ಸಂಪೂರ್ಣವಾಗಿ ವಿವರಿಸಲಾಗುವುದು.

ಇತ್ತೀಚಿನ ದಶಕಗಳಲ್ಲಿ ಸಾಮಾಜೀಕರಣ ಹಾಗೂ ಕಲಿಕೆಯತ್ತ ಗಮನವನ್ನು ಕೇಂದ್ರೀಕರಿಸುವ ಲಿಂಗಾಧಾರಿತ ಶ್ರೇಣೀಕರಣದ ಕುರಿತಾದ ಸಿದ್ಧಾಂತಗಳು ಹೆಚ್ಚು ಜನಪ್ರಿಯವಾಗಿವೆ. ಜಗತ್ತಿನಾದ್ಯಂತ, ಹುಡುಗಿಯರಿಗೆ ತಮ್ಮ ಅಧೀನಸ್ಥ ಪಾತ್ರಗಳನ್ನು ಒಪ್ಪಿಕೊಳ್ಳುವಂತೆ ಬೋಧಿಸಲಾಗುತ್ತಿದೆ ಎಂಬುದಕ್ಕೆ ವಿಪುಲ ಪುರಾವೆಗಳಿವೆ. ಬಾಲ್ಯದಿಂದಲೇ ಹುಡುಗರು ಮತ್ತು ಹುಡುಗಿಯರಿಗೆ ಸಮಾಜದಲ್ಲಿನ ವಿಭಿನ್ನ, ಅಸಮಾನ ಸ್ಥಾನಗಳನ್ನು ಒಪ್ಪಿಕೊಳ್ಳುವಂತೆ ಹೇಗೆ ಅತ್ಯಂತ ಮಾರ್ಮಿಕವಾಗಿ ಬೋಧಿಸಲಾಗುತ್ತದೆಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ, ಅಪಾರ ಮನ್ನಣೆಯನ್ನು ಗಳಿಸಿದ ನ್ಯಾನ್ಸಿ ಚೋಡೋರೋವ್ ಅವರ ಸಿದ್ಧಾಂತವು ಹೆಚ್ಚು ಉಪಯುಕ್ತವಾಗಿದೆ. ಅವರು ತಮ್ಮ 'ದಿ ರೀಪ್ರೊಡಕ್ಷನ್ ಆಫ್ ಮದರಿಂಗ್' (1978) ಎನ್ನುವ ಕೃತಿಯಲ್ಲಿ ಸ್ತ್ರೀವಾದಿ ಸಿದ್ಧಾಂತ ಹಾಗೂ ಫ್ರಾಯ್ಡ್ ಸಿದ್ಧಾಂತಗಳನ್ನು ಆಸಕ್ತಿಕರವಾಗಿ ಮೇಳೈಸಿದ್ದಾರೆ. ಉದಾಹರಣೆಗೆ, ಈ ಸಿದ್ಧಾಂತದ ಪ್ರಮುಖ ಭಾಗವು, ಮಹಿಳೆಯರೇ ಸದಾ ತಾಯಿಯ ಪಾತ್ರವನ್ನು ನಿರ್ವಹಿಸುವುದರಿಂದ, ಹುಡುಗರು ಮತ್ತು ಹುಡುಗಿಯರು, ತಮ್ಮನ್ನು ಮೊದಲು ಸ್ತ್ರೀ ದೃಷ್ಟಿಕೋನದಿಂದ ಗುರುತಿಸಿಕೊಳ್ಳುತ್ತಾರೆ. ಆದರೆ ಹುಡುಗರು ಇದನ್ನು ತಿರಸ್ಕರಿಸಿ, ಅದರ ವಿರುದ್ಧ ದಿಕ್ಕಿನಲ್ಲಿ ತಮ್ಮ ಗಮನವನ್ನು ಕೇಂದ್ರೀಕರಿಸುವುದರಿಂದ, ಮಹಿಳೆಯರಿಗೆ ಸಂಬಂಧಿಸಿದ ಎಲ್ಲವನ್ನೂ ಅವಮೌಲ್ಯನಗೊಳಿಸುತ್ತಾರೆ (devalue) ಎಂಬುದಾಗಿ ತಿಳಿಸುತ್ತದೆ. ಇದು ಮಹತ್ವಪೂರ್ಣವಾದುದರಿಂದ, ಈ ರೀತಿಯ ಸಿದ್ಧಾಂತವು ಭೌತಿಕ ಸಂಘರ್ಷ ಸಿದ್ಧಾಂತಗಳು ಉತ್ತರಿಸಬೇಕಾದ ಹಲವು ಪ್ರಶ್ನೆಗಳನ್ನು ಮಂಡಿಸುತ್ತದೆ. ಮಾನವನ

ಸಮಾಜಗಳ ಇತಿಹಾಸದುದ್ದಕ್ಕೂ ಲಿಂಗಾಧಾರಿತ ಅಸಮಾನತೆಗಳ ಮಟ್ಟವು ವಿಭಿನ್ನವಾಗಿರುವುದೇಕೆಂದು ನಾವು ಪ್ರಶ್ನಿಸತಕ್ಕದ್ದು. ಇಂದಿನ ಆಧುನಿಕ ಕೈಗಾರಿಕೀಕರಣಗೊಂಡ ಸಮಾಜದಲ್ಲಿ ಸಹ ಹೆಚ್ಚಿನ ವಿಭಿನ್ನತೆಯನ್ನು ಏಕೆ ಕಾಣುತ್ತೇವೆ? ಅಂದರೆ, ಇತರ ಅಂಶಗಳೂ ಈ ನಿಟ್ಟಿನಲ್ಲಿ ಸಂಚಾಲಿತವಾಗಿರಬೇಕು ಎಂದಾಯಿತು. ರಚನಾತ್ಮಕ ಹಂತವು ಅಸ್ತಿತ್ವದಲ್ಲಿರಲಿಲ್ಲ ಅಥವಾ ಸಾಮಾಜಿಕ ವ್ಯವಸ್ಥೆಗಳು ಲಿಂಗಾಧಾರಿತ ಅಸಮಾನತೆಗಳ ಸ್ವರೂಪವನ್ನು ರೂಪಿಸಲಿಲ್ಲವೆಂಬ ನಿಟ್ಟಿನಲ್ಲಿ, ಲಿಂಗಾಧಾರಿತ ಅಸಮಾನತೆಗಳನ್ನು ಕುರಿತ ವಿವರಗಳು ಸಾಮಾನ್ಯವಾಗಿ ಕಲಿಕೆಗೆ ಸಂಬಂಧಿಸಿದ ಸಿದ್ಧಾಂತದೊಂದಿಗೆ ನಿಂತುಹೋಗುತ್ತವೆ. ಈಗ ಕೆಲವು ರಾಚನಿಕ ಮಟ್ಟದ ಸಿದ್ಧಾಂತಗಳ ಕಡೆ ಗಮನಹರಿಸೋಣ.

**ಸಂರಚನಾತ್ಮಕ ಕ್ರಿಯಾತ್ಮಕ ಸಿದ್ದಾಂತಗಳು (Structural Functional Theories)**

ಸಾಂಪ್ರದಾಯಿಕ ಕ್ರಿಯಾತ್ಮಕ ಸಿದ್ಧಾಂತಗಳು ಮಹಿಳೆಯರ ಪರವಾಗಿರಲಿಲ್ಲವೆಂಬುದನ್ನು ಬಹುಶಃ ಹಲವರು ಸಮಾಜ ವಿಜ್ಞಾನಿಗಳು ಒಪ್ಪುತ್ತಾರೆ. ಸಾಕಷ್ಟು ಸಾಮಾಜಿಕ ಬದಲಾವಣೆಗಳು ಘಟಿಸುವ ಅಥವಾ ಲಿಂಗಾಧಾರಿತ ಅಸಮಾನತೆಗಳು ಬಹುಮಟ್ಟಿಗೆ ಕಡಿಮೆಯಾಗುವ ಸಾಧ್ಯತೆಗಳನ್ನು ಸೂಚಿಸುವ ಸಜ್ಜನಿಕೆಯೂ ಈ ಸಿದ್ದಾಂತಗಳಿಗಿಲ್ಲ. ಪಾರ್ಸನ್ಸ್‌ನ (1964:423) ಆಧುನಿಕ ಸಮಾಜಗಳಲ್ಲಿನ ಸಾಮಾಜಿಕ ಶ್ರೇಣೀಕರಣದ ಸಿದ್ಧಾಂತದ ಪ್ರಕಾರ, ಮಹಿಳೆಯರು ಪುರುಷರಿಗಿಂತಲೂ ಕೆಳಮಟ್ಟದಲ್ಲಿಯೇ ಇರಬೇಕು. ಎಲ್ಲ ಸಮಾಜಗಳಲ್ಲಿಯೂ ಕುಟುಂಬವೇ ಪ್ರಧಾನ ವ್ಯವಸ್ಥೆಯಾಗಿದ್ದು (ಸಂಸ್ಥೆ), ಕುಟುಂಬದಲ್ಲಿ, ಕಟ್ಟುನಿಟ್ಟಾದ ಲಿಂಗಾಧಾರಿತ ಶ್ರಮವಿಭಜನೆಗಳು ಅವಶ್ಯ. ಈ ಸಂಸ್ಥಾಗತ (institutional) ಪೂರ್ವಾಪೇಕ್ಷೆಯು (prerequisite); ಕುಟುಂಬದ ಹೊರಗೆ, ಪುರುಷರು ವಹಿಸುವ ಸಾಧಕ (instrumental) ಪಾತ್ರಗಳಿಗಿಂತಲೂ ಮಹಿಳೆಯರು ಕುಟುಂಬದಲ್ಲಿ ಭಾವಾತ್ಮಕ, ಆರೈಕೆಯ ಪಾತ್ರವನ್ನು ನಿಭಾಯಿಸುವುದನ್ನು ಬಯಸುತ್ತದೆ. ಮೇಲಾಗಿ, ಸ್ತ್ರೀ ಪುರುಷರಿಬ್ಬರೂ ಒಂದೇ ರೀತಿಯ ಪಾತ್ರವನ್ನು ವಹಿಸಿದಲ್ಲಿ, ಅದು ಅವರ ನಡುವೆ ಸ್ಪರ್ಧೆಯನ್ನುಂಟುಮಾಡಿ ಆ ಮೂಲಕ ಕುಟುಂಬವು ಛಿದ್ರಗೊಳ್ಳಲು ದಾರಿಯಾಗಬಹುದು ಎಂಬುದನ್ನೂ ಈ ಅಭಿಪ್ರಾಯವು ಸೂಚಿಸುತ್ತದೆ (ವಿಶೇಷವಾಗಿ ಪಾರ್ಸನ್ಸ್: 1964, 422-423ನ್ನು ಗಮನಿಸಿ).

ಅಧ್ಯಾಯ ಐದರಲ್ಲಿ ಸಾಮಾಜಿಕ ಶ್ರೇಣೀಕರಣದ ಕಾರ್ಯಾತ್ಮಕ ಸಿದ್ಧಾಂತಗಳ ಮೂಲಭೂತ ಸಮಸ್ಯೆಗಳನ್ನು ಚರ್ಚಿಸಿದ್ದೇವೆ. ಈ ಸಿದ್ಧಾಂತಗಳ ಪ್ರತಿಪಾದಕರು ಸಮಾಜಗಳು ಸಮಗ್ರ ವ್ಯವಸ್ಥೆಗಳೆಂದು ಬಗೆಯುತ್ತಾರೆ. ಹಾಗಾಗಿ ಸಮಾಜದ ಒಳಗಿನ ವ್ಯವಸ್ಥೆಗಳು ಒಟ್ಟಾರೆ ವ್ಯವಸ್ಥೆಯ ಒಳಿತಿಗಾಗಿಯೇ ಇರುವಂಥವು ಎಂಬುದು ಅವರ ಗ್ರಹಿಕೆ. ಆದರೆ ಹೀಗೆ ಯೋಚಿಸುವುದರ ಮೂಲಕ ಅವರು ಸಮಾಜದಲ್ಲಿನ ಪರಸ್ಪರ ವಿರೋಧಿ ಹಿತಾಸಕ್ತ ಗುಂಪುಗಳನ್ನು ಮತ್ತು ಅಧಿಕಾರದಲ್ಲಿನ ವ್ಯತ್ಯಾಸಗಳು ಸಮಾಜದ ಕಾರ್ಯನಿರ್ವಹಣೆಯನ್ನು, ಅದರಲ್ಲೂ ವಿಶೇಷವಾಗಿ ಸಾಮಾಜಿಕ ಶ್ರೇಣೀಕರಣದ ಕುರಿತ ಬಹಳಷ್ಟನ್ನು ಹೇಗೆ ವಿವರಿಸುತ್ತವೆಂಬುದನ್ನು ನಿರ್ಲಕ್ಷಿಸುತ್ತಾರೆ. ಕುಟುಂಬ ಮತ್ತು ಗಂಡು, ಹೆಣ್ಣುಗಳ ಪಾತ್ರಗಳನ್ನು ಕುರಿತ ಅವರ ದೃಷ್ಟಿಕೋನದ ಬಗ್ಗೆಯೂ ಇದನ್ನೇ ಹೇಳಬಹುದು. ಪಾರ್ಸನ್ ವಿವರಿಸಿರುವ ಸಂಪ್ರದಾಯಬದ್ಧ ಕುಟುಂಬದಲ್ಲಿನ ಅಧಿಕಾರದ ವ್ಯತ್ಯಾಸಗಳು ಕುಟುಂಬದಲ್ಲಿನ ಕೆಲವರಿಗೆ ಅನುಕೂಲಕರವಾಗಿದ್ದು, ಕುಟುಂಬದ ಇತರೆ ಸದಸ್ಯರ ವಿರುದ್ಧವಾಗಿರಬಹುದೆಂಬುದನ್ನು ಪಾರ್ಸನ್‌ನ ಸಿದ್ಧಾಂತ ಗುರುತಿಸುವುದೇ ಇಲ್ಲ. ಅಲ್ಲದೆ ಈ ನಿರ್ಲಕ್ಷ್ಯದಿಂದಾಗಿ ಸ್ವೀಡನ್, ಜರ್ಮನಿ ಮತ್ತು ಜಪಾನ್‌ನಂಥ ಸಮಾಜಗಳ ನಡುವೆ ಇರುವ ಬೃಹತ್ ಲಿಂಗಾಧಾರಿತ ಅಸಮಾನತೆಗಳನ್ನು ವಿವರಿಸಲು ಪಾರ್ಸನ್‌ಗೆ ಸಾಧ್ಯವಾಗಿಲ್ಲ.

**ಸಂಘರ್ಷ ಸಿದ್ಧಾಂತಗಳು (Conflict Theories):**

ಅಧ್ಯಾಯ ಮೂರರಲ್ಲಿ ಮಾನವ ಸಮಾಜಗಳಲ್ಲಿನ ಸಾಮಾಜಿಕ ಶ್ರೇಣೀಕರಣದ ಚರಿತ್ರೆಯನ್ನು ಅರ್ಥಮಾಡಿಕೊಳ್ಳಲಾರಂಭಿಸಿದೆವು. ಪ್ರಸ್ತುತ ಅಧ್ಯಾಯದಲ್ಲಿ ಆ ಅಧ್ಯಯನವನ್ನು ಮರುಪರಿಶೀಲಿಸಿ ಅದಕ್ಕೆ ಹೆಚ್ಚು ವಿವರಗಳನ್ನು ಸೇರಿಸಿದ್ದೇವೆ. ಮಾನವ ಸಮಾಜಗಳಲ್ಲಿನ ಚರಿತ್ರೆಯ ಈ ಮೊದಲ ಪುನರಾವಲೋಕನದಲ್ಲಿ, ನಾವು ಲೆನ್ಸ್ಕಿ (196;, 1984) ಕಾರ್ಯವನ್ನು ಮುಖ್ಯವಾಗಿ ಆಧರಿಸಿದ್ದೇವೆ. ಮಾನವ ಸಮಾಜಗಳಲ್ಲಿ ಸಾಮಾಜಿಕ ಶ್ರೇಣೀಕರಣದ ವಿಕಾಸವನ್ನು ವಿವರಿಸಲು

ಲೆನ್ಸ್ಕಿ, ಮಾನವ ಶಾಸ್ತ್ರಜ್ಞರಲ್ಲಿನ ಚಾರಿತ್ರಿಕ ಭೌತವಾದಿಗಳನ್ನು ಬಹಳಷ್ಟು ಅವಲಂಬಿಸಿದ್ದಾರೆ. ಇತ್ತೀಚೆಗೆ ಅತ್ಯಂತ ಹೆಚ್ಚಿನ ಮನ್ನಣೆಯನ್ನು ಪಡೆದ ಕೆಲವು ಲಿಂಗಾಧಾರಿತ ಸಿದ್ಧಾಂತಗಳು ಚಾರಿತ್ರಿಕ-ಭೌತವಾದಿ ದೃಷ್ಟಿಕೋನವನ್ನು ಅತ್ಯಂತ ನಿಕಟವಾಗಿ ಅನುಸರಿಸುತ್ತವೆ.

ಈ ಸಿದ್ಧಾಂತಗಳಲ್ಲಿ ಛೇಫೆಜ್‌ನ ಸಿದ್ಧಾಂತವು (1984, 1988) ಸರ್ವೋತ್ತಮವೆನಿಸಿದೆ. ಇತಿಹಾಸದಾದ್ಯಂತದ ಮಹಿಳೆಯರ ಸ್ಥಾನವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಮೂರು ಅಂಶಗಳನ್ನು ಪ್ರಮುಖವಾಗಿ ಗಣನೆಗೆ ತೆಗೆದುಕೊಳ್ಳಬೇಕೆಂದು ಛೇಫೆಜ್ ಹೇಳುತ್ತಾನೆ: ಅವೆಂದರೆ, 1) ಕಾರ್ಯನಿರ್ವಹಣೆಯನ್ನು ಹೇಗೆ ವ್ಯವಸ್ಥೆಗೊಳಿಸಲಾಗಿದೆ, 2) ಅಸ್ತಿತ್ವದಲ್ಲಿರುವ ಬಂಧುತ್ವ (kinship) ವ್ಯವಸ್ಥೆಯ ಪ್ರಕಾರ (type) 3) ಲಿಂಗಾಧಾರಿತ ಅಸಮಾನತೆಗೆ ದೊರಕುವ ತಾತ್ವಿಕ ಬೆಂಬಲದ ಮಟ್ಟಗಳು. ಇವುಗಳಲ್ಲಿ ಮೊದಲನೆಯದು ಚಾರಿತ್ರಿಕವಾಗಿ ಸಮಾಜದ ಪ್ರಕಾರಗಳ ವಿಕಾಸವನ್ನು ಕುರಿತ ನಮ್ಮ ಪರಿಶೀಲನೆಯನ್ನು ಅನುಸರಿಸುತ್ತದೆ. ನಾವು ನೋಡಿದಂತೆ, ಆಹಾರ ಸಂಗ್ರಹಣೆಯ ಹಂತದ ಸಮಾಜಗಳಲ್ಲಿನ ಕಾರ್ಯನಿರ್ವಹಣೆಯ ವ್ಯವಸ್ಥೆಯು ಲಿಂಗ ಸಮಾನತೆಗೆ ಬೇಟೆಯಾಧಾರಿತ ಸಮಾಜಗಳಿಗಿಂತಲೂ ಹೆಚ್ಚಿನ ಒತ್ತು ನೀಡುತ್ತಿತ್ತು. ಮುಂದೆ, ತೋಟಗಾರಿಕೆ ಮತ್ತು ಹೆಚ್ಚು ಪ್ರಗತಿಶೀಲವೆನಿಸಿದ್ದ ಕೃಷಿಯು ಇತಿಹಾಸದಲ್ಲಿ ಮಹಿಳೆಯರನ್ನು ಹೆಚ್ಚಿನ ಅಧೀನತೆಗೆ ಒಳಪಡಿಸಿತು. ಅಭಿವೃದ್ಧಿ ಹೊಂದಿದ ಔದ್ಯೋಗೀಕೃತ ಸಮಾಜಗಳಲ್ಲಿನ ಕಾರ್ಯನಿರ್ವಹಣಾ ವ್ಯವಸ್ಥೆಯು ಹೆಚ್ಚಿನ ಲಿಂಗ ಸಮಾನತೆಗೆ ಅವಕಾಶವಿತ್ತಿತು. ಇಲ್ಲಿ '*ಅವಕಾಶವಿತ್ತಿತು*' ಎಂಬ ಪದವು ಮಹತ್ವಪೂರ್ಣವಾದುದು. ಏಕೆಂದರೆ ಇತರ ಎರಡು ಪ್ರಾಬಲ್ಯಗಳು ಲಿಂಗ ಸಮಾನತೆಗಳನ್ನು ಕಡಿಮೆಮಾಡುವ ನಿಟ್ಟಿನಲ್ಲಿ ಈಗಲೂ ಕಾರ್ಯಪ್ರವೃತ್ತವಾಗಬಹುದು. ಉದಾಹರಣೆಗೆ, ಥಾಯ್ಲೆಂಡಿನಲ್ಲಿ ಇತರ ಏಷ್ಯನ್ ಸಮಾಜಗಳಿಗಿಂತಲೂ (ಉದಾ: ಕೊರಿಯಾ) ಅತ್ಯಂತ ಹೆಚ್ಚಿನ ಲಿಂಗ ಸಮಾನತೆ ಇರುವುದೇಕೆಂಬುದನ್ನು ಅರ್ಥಮಾಡಿಕೊಳ್ಳಲು, ಅಲ್ಲಿ ವಿವಾಹಿತ ಪುರುಷನು ಹೆಂಡತಿಯ ಮನೆಯಲ್ಲಿಯೇ ವಾಸಿಸುವ ಪತ್ನೀ ಕುಟುಂಬಕ (matrilocal) ವ್ಯವಸ್ಥೆ ಮತ್ತು ಕೇವಲ ಗಂಡು ಅಥವಾ ಹೆಣ್ಣಿನ ಪೂರ್ವಿಕರ ನಿಟ್ಟಿನಲ್ಲಿ ಕುಟುಂಬದ ಸಂತತಿಯ ಜಾಡುಹಿಡಿಯದಿರುವ ಏಕ ವಂಶಪರಂಪರೆ ವ್ಯವಸ್ಥೆಗಳನ್ನು ಪರಿಶೀಲಿಸತಕ್ಕದ್ದು. ಅದೇ ರೀತಿಯಲ್ಲಿ, ಜಪಾನ್‌ಗೆ ಹೋಲಿಸಿದಲ್ಲಿ ಅಮೆರಿಕ ಹಾಗೂ ಯೂರೋಪಿನ ಇತರ ಔದ್ಯೋಗಿಕ ರಾಷ್ಟ್ರಗಳಲ್ಲಿ ಲಿಂಗ ಅಸಮಾನತೆಯ ಮಟ್ಟ ಕಡಿಮೆ ಇರುವುದನ್ನೂ ಸಹ ಮಹಿಳೆಯರ ಸ್ಥಾನವನ್ನು ಪ್ರಭಾವಿಸುವ ಬಂಧುತ್ವ ವ್ಯವಸ್ಥೆಗಳು ಮತ್ತು ವಿಚಾರಧಾರೆಗಳನ್ನು ಆಧರಿಸಿ ಸ್ಪಷ್ಟಪಡಿಸಿಕೊಳ್ಳಬಹುದು (ಕ್ಯಾಸ್ಪರ್, ಮೆಕ್‌ಲನಹನ್ ಮತ್ತು ಗಾರ್ಫಿಂಕಲ್ 1994).

ಮೇಲಿನ ಸಿದ್ಧಾಂತವನ್ನೇ ಹೋಲುವ ಮತ್ತೊಂದು ಸಿದ್ಧಾಂತವು ಸ್ಯಾಂಡೇ (1981) ಅವರ ಅಧ್ಯಯನದಿಂದ ಪ್ರಾಪ್ತವಾಗಿದೆ. ಇದಕ್ಕೆ ಬೆಂಬಲವಾಗಿ 150ಕ್ಕೂ ಹೆಚ್ಚು ಸಮಾಜಗಳಿಂದ ದತ್ತಾಂಶವನ್ನು ಒದಗಿಸಲಾಗಿದೆ. ಸಮಾಜದಲ್ಲಿನ ಪ್ರಚಲಿತ ವಾತಾವರಣಕ್ಕೆ ಒತ್ತು ನೀಡುವ ಸ್ಯಾಂಡೇ, ಪರಿಸರದಲ್ಲಿ (ಸಾಮಾಜಿಕ ಹಾಗೂ ಭೌಗೋಳಿಕ ಪರಿಸರ) ಹಾನಿಗೀಡಾಗುವ ಸಂಭವವು (risk) ಹೆಚ್ಚಾಗಿದ್ದಾಗ, ಮತ್ತು ಸಂಪನ್ಮೂಲಗಳ ಲಭ್ಯತೆಯ ಭರವಸೆ ಇಲ್ಲದ ಸಂದರ್ಭಗಳಲ್ಲಿ ಪುರುಷರು ಪ್ರಬಲರಾಗಿರುತ್ತಾರೆ (dominant) ಎನ್ನುವುದನ್ನು ಶೋಧಿಸಿದ್ದಾರೆ. ಇದನ್ನು ಮತ್ತೊಂದು ರೀತಿಯಲ್ಲಿ ಹೇಳುವುದಾದರೆ; ನಾವು ನೋಡಿದಂತೆ, ಬೇಟೆಯನ್ನಾಧರಿಸಿದ ಮತ್ತು ವ್ಯಾಪಕ ಯುದ್ಧಗಳಲ್ಲಿ ತೊಡಗಿರುವ ಸಮಾಜಗಳಲ್ಲಿ ಪುರುಷರು ಹೆಚ್ಚು ಪ್ರಾಬಲ್ಯದ ಪ್ರವೃತ್ತಿಯನ್ನು ಹೊಂದಿರುತ್ತಾರೆ. ಪರಿಸರವನ್ನು ನಿರ್ವಹಿಸುವ ನಿಟ್ಟಿನಲ್ಲಿ ಬೆಳೆದುಬಂದ ಆರ್ಥಿಕ ವ್ಯವಸ್ಥೆಗಳ ಜೊತೆಗೆ, ಸಮಾಜದ ಮೂಲಭೂತ ವಾತಾವರಣ, ಬಂಧುತ್ವದ ವ್ಯವಸ್ಥೆಗಳು ಮತ್ತು ರೂಪುಗೊಂಡ ಚಿಂತನಾಕ್ರಮಗಳು ಸಮಾಜದಲ್ಲಿನ ಲಿಂಗಾಧಾರಿತ ಅಸಮಾನತೆಗಳನ್ನು ಬಲಪಡಿಸುತ್ತವೆ. ವಾಸ್ತವವಾಗಿ ಸ್ಯಾಂಡೇ (1981), 150 ಸಮಾಜಗಳಲ್ಲಿನ ಸೃಷ್ಟಿಯ ಬಗೆಗಿನ ಕಥನಗಳ ವಿಶ್ಲೇಷಣೆ ನಡೆಸಿದ್ದು, ಆ ಕಥನಗಳು ವಾತಾವರಣ ಮತ್ತು ಸಮಾಜದಲ್ಲಿನ ಸ್ತ್ರೀ ಪುರುಷರ ಸಾಪೇಕ್ಷ ಸ್ಥಾನವನ್ನು ಪ್ರತಿಫಲಿಸುವಂಥವಾಗಿವೆ.

ಸಂಘರ್ಷ ಸಿದ್ಧಾಂತಗಳ ವರ್ಗದಲ್ಲಿ, ಸಾಧಾರಣವಾಗಿ ಸಂಘರ್ಷದ ದೃಷ್ಟಿಕೋನವನ್ನು ಹೊಂದಿರುವ ವಿವಿಧ ರೀತಿಯ ಸ್ತ್ರೀವಾದಿ ಸಿದ್ಧಾಂತವಾದಿಗಳನ್ನು ಪರಿಗಣಿಸಬೇಕಿದೆ. ಮೊದಲಿಗೆ, **ಉದಾರವಾದಿ ಸ್ತ್ರೀವಾದಿಗಳು** ಲಿಂಗಾಧಾರಿತ ಅಸಮಾನತೆಯನ್ನು

ಹೆಣ್ಣು ಗಂಡುಗಳು ತಮ್ಮ ಲಿಂಗದ ಕಾರಣವಾಗಿ ನಿರ್ವಹಿಸುವ ಪಾತ್ರದ ಸಾಮಾಜೀಕರಣ ಮತ್ತು ಲಿಂಗಭೇದಭಾವದ ಹಿನ್ನೆಲೆಯಲ್ಲಿ ಗುರುತಿಸುತ್ತಾರೆ. ಇಲ್ಲಿ ಮುಖ್ಯವಾಗಿರುವುದು ಗಂಡಿಗೆ ಹೋಲಿಸಿದರೆ ಹೆಣ್ಣಿನ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಹಕ್ಕುಗಳ ಮೇಲೆ ವಿಧಿಸಲಾಗುವ ಮಿತಿಗಳು. ಈ ದೃಷ್ಟಿಕೋನದ ಪ್ರತಿಪಾದಕರ ಪ್ರಕಾರ, ಹೆಣ್ಣು ಪ್ರಧಾನವಾಗಿ ಮನೆಯ ಖಾಸಗಿ ಕ್ಷೇತ್ರಕ್ಕೆ ಮತ್ತು ಗೃಹಕೃತ್ಯದ ಜವಾಬ್ದಾರಿಗಳಿಗೆ ಬದ್ಧಳಾಗಿರುವುದನ್ನು ನಿರೀಕ್ಷಿಸಲಾಗಿದ್ದು, ಆಕೆಯ ಸಾಮಾಜೀಕರಣವು ಈ ಪಾತ್ರಗಳಿಗನುಗುಣವಾಗಿರುತ್ತದೆ. ಹಾಗಾಗಿ ಅವಳಿಗೆ ಶೈಕ್ಷಣಿಕವಾಗಿ, ಮನೆಯ ಹೊರಗಿನ ಉದ್ಯೋಗ ಮತ್ತು ಸಾರ್ವಜನಿಕ ರಾಜಕಾರಣದ ಭಾಗವಹಿಸುವಿಕೆಗಳಲ್ಲಿ ಸಮಾನ ಅವಕಾಶಗಳಿಲ್ಲ. ಆಧುನಿಕ ಜಗತ್ತಿನಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿನ ಚಟುವಟಿಕೆಗಳ ಮೂಲಕ ನೈಜ ಅಧಿಕಾರವನ್ನು ಪಡೆಯಬಹುದಾಗಿರುವುದರಿಂದ, ಈ ಸಿದ್ಧಾಂತದಲ್ಲಿ ಕಾನೂನಾತ್ಮಕ ಹಾಗೂ ರಾಜಕೀಯ ಮಾರ್ಗಗಳ ಮೂಲಕ ಮಹಿಳೆಯರಿಗೆ ಸಮಾನ ಹಕ್ಕುಗಳು ಮತ್ತು ಅವಕಾಶಗಳನ್ನು ವೃದ್ಧಿಸುವುದರಿಂದ ಲಿಂಗಾಧಾರಿತ ಸಮಾನತೆಗಳನ್ನು ವರ್ಧಿಸಬಹುದಾಗಿದೆ. ಇದು ಸಾಧ್ಯವಾಗಬೇಕೆಂದರೆ, ಗಂಡು ಹೆಣ್ಣುಗಳ ಪಾತ್ರಗಳ ಸಾಮಾಜೀಕರಣವನ್ನು ಮತ್ತು ಪರಂಪರೆಯಿಂದ ಬಂದಿರುವ ಲಿಂಗಾಧಾರಿತ ಪಾತ್ರಗಳ ಸಿದ್ಧಮಾದರಿಗಳನ್ನು ಬದಲಿಸಬೇಕಾಗುತ್ತದೆ. ಆದರೆ ಸಮಾನ ಅವಕಾಶಗಳನ್ನು ಒದಗಿಸಿ, ಹೆಚ್ಚಿನ ವ್ಯಕ್ತಿಗತ ಹಕ್ಕುಗಳನ್ನು ದೊರಕಿಸುವುದರ ಮೂಲಕ ಮಾತ್ರ ಸಮಾನತೆಯಲ್ಲಿ ಹೆಚ್ಚಳವನ್ನು ಸಾಧಿಸುವುದು ಸಾಧ್ಯ ಎನ್ನುವ ಉದಾರವಾದಿ ಸ್ತ್ರೀವಾದಿಗಳ ನಿಲುವು ವಿಮರ್ಶೆಗೆ ಗುರಿಯಾಗಿದೆ. ಉದ್ಯೋಗ, ಶಿಕ್ಷಣ ಮತ್ತು ರಾಜಕಾರಣಗಳು ವ್ಯವಸ್ಥೆಗೊಂಡಿರುವ ರೀತಿಯಲ್ಲಿ ರಚನಾತ್ಮಕ ಬದಲಾವಣೆಗಳಿಲ್ಲದಿದ್ದಲ್ಲಿ, ಲಿಂಗಾಧಾರಿತ ಸಮಾನತೆಯು ಸೀಮಿತವಾಗಿರುತ್ತದೆಂಬುದು, ಟೀಕಾಕಾರರ ವಾದವಾಗಿದೆ. ಉದಾಹರಣೆಗೆ, ಎಲ್ಲ ವಯಸ್ಕ ಗಂಡಸರು ಹಾಗೂ ಹೆಂಗಸರು ಶಿಕ್ಷಣ ಪಡೆದು ಆಧುನಿಕ ಔದ್ಯಮಿಕ ಪ್ರಪಂಚದಲ್ಲಿ ತಮ್ಮ ವೃತ್ತಿಗಳಲ್ಲಿಯೇ ಯಶಸ್ಸನ್ನು ಸಾಧಿಸಲು ದಿನಪೂರ್ತಿ ಧೀರ್ಘಕಾಲ ಕೆಲಸದಲ್ಲಿ ತೊಡಗಿದ್ದರೆ, ಉಳಿದ ಗೃಹಕೃತ್ಯಗಳು ಮತ್ತು ಪಾಲನೆ, ಪೋಷಣೆಯ ಕೆಲಸಗಳನ್ನು ನಿಭಾಯಿಸುವುದಾದರೂ ಹೇಗೆ?

**ತೀವ್ರವಾದಿ ಸ್ತ್ರೀವಾದಿಗಳು** ಪುರುಷ ಪ್ರಧಾನ ವ್ಯವಸ್ಥೆಯೇ ಮಹಿಳೆಯರ ಅಧೀನ ಸ್ಥಿತಿಗೆ ಕಾರಣ ಎನ್ನುತ್ತಾರೆ. ಎಲ್ಲ ಸಾರ್ವಜನಿಕ, ಖಾಸಗಿ ವ್ಯವಸ್ಥೆಗಳೂ ಪುರುಷರ ಹಿಡಿತದಲ್ಲಿರುವುದರಿಂದ, ಆರ್ಥಿಕ ಅಧಿಕಾರವೂ ಸಹ ಅವರಲ್ಲಿಯೇ ಕೇಂದ್ರಿಕೃತಗೊಂಡಿದ್ದು ಮಹಿಳೆಯರ ಲೈಂಗಿಕತೆ ಹಾಗೂ ಮಕ್ಕಳಿಗೆ ಜನ್ಮ ನೀಡುವಂಥ ವಿಷಯಗಳೂ ಅವರ ನಿಯಂತ್ರಣಕ್ಕೊಳಪಟ್ಟಿವೆ ಎನ್ನುವುದು ಇವರ ಅಭಿಪ್ರಾಯ. ಮಹಿಳೆಯರ ಪರಾಧೀನತೆ ಮತ್ತು ಅವರ ಪಾತ್ರಗಳು ಹಾಗೂ ಕೊಡುಗೆಗಳ ಅಪಮೌಲ್ಯವನ್ನು ಆಂತರಿಕೀಕರಣಗೊಳಿಸಿಕೊಳ್ಳುವಂತೆ (internalize) ಮಹಿಳೆಯರಿಗೆ ಮತ್ತು ಪುರುಷರಿಗೆ ಬೋಧಿಸಲಾಗುತ್ತದೆ. ಈ ದೃಷ್ಟಿಕೋನದ ಪ್ರಕಾರ, ಲಿಂಗಾಧಾರಿತ ಸಮಾನತೆಯನ್ನು ಸಾಧಿಸಬೇಕಾದರೆ ಪುರುಷರಿಗೆ ವಿಶೇಷಾಧಿಕಾರ ನೀಡುವ ಸಂಸ್ಥಾನಿಕ (institutional) ವ್ಯವಸ್ಥೆಯನ್ನು ಅಮೂಲಾಗ್ರವಾಗಿ ಪುನರ್ನಿರ್ಮಾಣ ಮಾಡಬೇಕು, ಮಾತ್ರವಲ್ಲದೆ, ಸ್ತ್ರೀಪುರುಷರಿಬ್ಬರನ್ನೂ ಸಮಾನ ಗೌರವದಿಂದ ಕಾಣುವ, ಸಮಾನತೆಯ ಆಧಾರದ ಮೇಲೆ ಸಂದರ್ಭಕ್ಕೆ ಹೊಂದಿಕೊಳ್ಳುವಂತೆ ಅವರ ಸಂಬಂಧಗಳನ್ನು ಪುನಃ ಸ್ಥಾಪಿಸುವ ನಿಟ್ಟಿನಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಹೆಚ್ಚಿಸಬೇಕು. ಕೆಲವು ತೀವ್ರವಾದಿ ಸ್ತ್ರೀವಾದಿಗಳ ಪ್ರಕಾರ ಸಮಾಜದಲ್ಲಿ ಮಹಿಳೆಯರು ಯಾವುದೇ ಅಧಿಕಾರವನ್ನು ಪಡೆಯುವ ನಿಟ್ಟಿನಲ್ಲಿ ಪುರುಷರ ಯಾವುದೇ ಸಹ-ಸಂಬಂಧವನ್ನು (connection) ತಿರಸ್ಕರಿಸುತ್ತಾರೆ.

**ಮಾರ್ಕ್ಸ್‌ವಾದಿ ಸ್ತ್ರೀವಾದಿಗಳ** ಅಭಿಪ್ರಾಯದಲ್ಲಿ ಲಿಂಗಾಧಾರಿತ ಅಸಮಾನತೆಯ ಮೂಲವಿರುವುದು ಆಸ್ತಿಯ ಖಾಸಗಿ ಒಡೆತನವನ್ನು ಆಧರಿಸಿದ ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ವರ್ಗಾಧಾರಿತ ಶೋಷಣೆಯಲ್ಲಿ. ಈ ದೃಷ್ಟಿಕೋನದ ಪ್ರಕಾರ, ಆಸ್ತಿಯ ಮೇಲಿನ ಪರಿಣಾಮಕಾರಿಯಾದ ಹಕ್ಕು, ಏಕ ಪತ್ನಿತ್ವದ ಪಿತೃವಂಶೀಯ ಮತ್ತು ಪುರುಷ-ಪ್ರಧಾನ ವಿಭಕ್ತ ಕುಟುಂಬದ ಸ್ವರೂಪದ ಮೇಲಿನ ಒತ್ತಡಕ್ಕೆ ದಾರಿಮಾಡುತ್ತದೆ. ಇದರ ಪರಿಣಾಮದಿಂದಾಗಿ, ವ್ಯಕ್ತಿಗತ ಆಸ್ತಿಯ ಹಕ್ಕುಗಳ ಮಾಲೀಕನಾದ ಪತಿ/ತಂದೆಯಿಂದ ಪತ್ನಿ ಹಾಗೂ ಮಕ್ಕಳ ನಿಯಂತ್ರಣವನ್ನು ಕಾಣಬಹುದಾಗಿದೆ. ಮಾರ್ಕ್ಸ್‌ವಾದಿ ಸ್ತ್ರೀವಾದಿಗಳ ಪ್ರಕಾರ, ಮಹಿಳೆಯರು ಗೃಹಕೃತ್ಯಗಳ ಪರಿಶ್ರಮ ಮತ್ತು ಸೇವೆಯಲ್ಲಿ ತೊಡಗುವ ಕಾರಣ, ಬಂಡವಾಳಶಾಹಿಗಳು ಕೂಲಿಗಾರರಿಂದ

ಹೆಚ್ಚಿನ ಕೆಲಸವನ್ನು ಸೆಳೆಯಲು ಸಾಧ್ಯವಾಗಿದೆ. ಬಂಡವಾಳಿಗರು ತಮಗೆ ಅವಶ್ಯಕತೆಯಿದ್ದಾಗ ಮಹಿಳೆಯರ ಶ್ರಮವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ, ಅವರಿಗೆ ಕರೆ ನೀಡಲು ಅನುವಾಗುವಂತೆ, ಮಹಿಳೆಯರು ತಮ್ಮ ದುಡಿಮೆಯನ್ನು 'ಮೀಸಲಿಟ್ಟಿರುತ್ತಾರೆ. 'ಇತ್ತೀಚಿನ ಕೆಲವು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಸಮಾಜದ ವಿವಿಧ ವರ್ಗಗಳ ಮಹಿಳೆಯರನ್ನು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಔಪಚಾರಿಕ ಹಾಗೂ ಅನೌಪಚಾರಿಕ ಶ್ರಮಿಕರಾಗಿ ವಿಭಿನ್ನವಾಗಿ ಸೇರಿಸಲಾಗಿದೆಯೆಂಬುದನ್ನು ಗುರುತಿಸಿದ್ದಾರೆ. ವರ್ಗ ಶೋಷಣೆ ಅಂತ್ಯಗೊಂಡಾಗ, ಲಿಂಗಾಧಾರಿತ ದಬ್ಬಾಳಿಕೆ ಮತ್ತು ಅಸಮಾನತೆಗಳೂ ಅನಗತ್ಯ ವಿಷಯಗಳಾಗುತ್ತವೆ ಎಂಬುದು ಮಾರ್ಕ್ಸ್‌ವಾದಿಗಳ ನಿಲುವು.

ತೀರ ಇತ್ತೀಚೆಗೆ ಸ್ತ್ರೀವಾದಿಗಳಲ್ಲಿ ವಿಸ್ತೃತ ಸಮಾಜವಾದಿ ಸ್ತ್ರೀವಾದಿ ದೃಷ್ಟಿಕೋನವು ರೂಪುಗೊಂಡಿದ್ದು, ಅದರ ಪ್ರತಿಪಾದಕರು ಹೇಳುವಂತೆ, ಲಿಂಗಾಧಾರಿತ ದಬ್ಬಾಳಿಕೆಯು ಬಂಡವಾಳಶಾಹಿ ವ್ಯವಸ್ಥೆಗೂ ಹಿಂದಿನದು. ಮಹಿಳೆಯರ ಮೇಲಿನ ದಬ್ಬಾಳಿಕೆಯು ಬಂಡವಾಳಶಾಹಿ ವ್ಯವಸ್ಥೆಯಡಿಯಲ್ಲಿನ ಪುರುಷ ಪ್ರಾಧಾನ್ಯತೆ ಮತ್ತು ವರ್ಗ ಶೋಷಣೆ ಈ ಎರಡರ ಪರಿಣಾಮವಾಗಿ ಹುಟ್ಟಿಕೊಂಡದ್ದು. ಮೇಲಾಗಿ, ಈ ದೃಷ್ಟಿಕೋನದ ಪ್ರಕಾರ, ಲಿಂಗಾಧಾರಿತ ದಬ್ಬಾಳಿಕೆಯು; ಜನಾಂಗ, ಜಾತಿ, ರಾಷ್ಟ್ರೀಯತೆ, ಲೈಂಗಿಕ ಮನೋಭಾವ, ದೌರ್ಬಲ್ಯ ಮುಂತಾಗಿ ಸಮಾಜದಲ್ಲಿನ ವಿವಿಧ ಸ್ವರೂಪದ ಪೀಡನೆಗಳೊಂದಿಗೆ ಸಂಪರ್ಕಿತಗೊಂಡಿದೆ. ಸಮಾಜದಲ್ಲಿನ ಎಲ್ಲ ಬಗೆಯ ದಬ್ಬಾಳಿಕೆಯನ್ನೂ ಮೆಟ್ಟಿನಿಲ್ಲುವ ತೀವ್ರ ಪ್ರಯತ್ನಗಳಿಂದ ಮಾತ್ರ ಲಿಂಗ ಸಮಾನತೆ ಸಾಧ್ಯವಾಗಬಹುದು. ಜ್ಞಾನ, ಪ್ರಜ್ಞೆ ಮತ್ತು ಸಾಮಾಜಿಕ ವ್ಯವಸ್ಥೆಗಳು ಇವೆಲ್ಲವೂ ಬದಲಾದಾಗ ಮಾತ್ರ ಎಲ್ಲ ಜನರೂ ಸಮತೋಲನ ಹಾಗೂ ಮಾನವೀಯತೆಯಿಂದ ಕೂಡಿದ ಬಾಳ್ವೆ ನಡೆಸಬಹುದು. ಸ್ತ್ರೀವಾದಿ ಸಿದ್ಧಾಂತಗಳಲ್ಲಿನ ಈ ಇತ್ತೀಚಿನ ಬೆಳವಣಿಗೆಗಳು ಅಮೆರಿಕದಲ್ಲಿ ಹಾಗೂ ಜಾಗತಿಕವಾಗಿ ಮಹಿಳೆಯರ ಬದುಕಿನ ಬಹುತ್ವವನ್ನು ಕುರಿತ ಅರಿವಿನ ಹೆಚ್ಚಳದ ಪರಿಣಾಮವೇ ಹೌದು. ಉದಾಹರಣೆಗೆ, ಮಹಿಳೆಯರ ಜೀವನವು ಲಿಂಗಾಧಾರಿತ ಮಾತ್ರವಲ್ಲದೆ, ಸ್ಥಳೀಯ ಸಮುದಾಯವನ್ನು ಪ್ರಭಾವಿಸುವ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಪರಿಸರ ಸಂಬಂಧಿತ ವಿಷಯಗಳ ಜೊತೆಗೂ ನಿಕಟವಾಗಿ ಬೆಸೆದುಕೊಂಡಿದೆ. ಹಾಗಾಗಿ ಲಿಂಗ ಸಮಾನತೆಯನ್ನು ಸಾಧಿಸಲು ಕೇವಲ ಮಹಿಳೆಯ ಕ್ರಿಯಾಶೀಲತೆಯೊಂದೇ ಸಾಲದು. ಕಾರ್ಪೊರೇಟ್ ಜಾಗತೀಕರಣ, ಪ್ರಾಕೃತಿಕ ವಿಪತ್ತುಗಳು, ಸಾಮ್ರಾಜ್ಯಶಾಹಿ ಮತ್ತು ಜನಾಂಗೀಯವಾದಗಳಿಂದ ಸಮುದಾಯಗಳು ಮತ್ತು ಸಂಸ್ಕೃತಿಗಳು ಅಪಾಯವನ್ನೆದುರಿಸುತ್ತಿದ್ದು, ವಿವಿಧ ಹಂತಗಳಲ್ಲಿನ ಇವುಗಳ ಸಂರಕ್ಷಣೆಯೂ ಇದಕ್ಕೆ ಅಗತ್ಯವೆನಿಸಿದೆ.

## **ಲಿಂಗಾಧಾರಿತ ಆದಾಯದ ಅಸಮಾನತೆಗಳ ಮೇಲೆ ವರ್ಗದ ಪ್ರಭಾವಗಳು**:

ಲಿಂಗಾಧಾರಿತ ತಾರತಮ್ಯ ಹಾಗೂ ಅಸಮಾನತೆಗಳಿಗೆ ಸಂಬಂಧಿಸಿದ ವಿಶೇಷೀಕೃತ (specialized) ಸಿದ್ಧಾಂತಗಳನ್ನು ದಾಟಿ ಮುಂದೆ ಹೋಗಬೇಕಾಗಿದೆ. ನಾವು ಹಿಂದಿನ ಅಧ್ಯಾಯದಲ್ಲಿ ಬಡತನದ ಬಗ್ಗೆ ಚರ್ಚಿಸಿರುವಂತೆ, ಬಡತನದ ಕಾರಣಗಳನ್ನು ಕುರಿತ ವಿಶೇಷೀಕೃತ ಸಿದ್ಧಾಂತಗಳ ಹೊರತಾಗಿಯೂ, ಜನರು ಏಕೆ ಬಡವರು ಎಂಬುದನ್ನು, ಅಲ್ಲಿನ ವರ್ಗ ವ್ಯವಸ್ಥೆಯ ಕಾರ್ಯನಿರ್ವಹಣೆಯ (operation) ಮಾನಕಗಳ (standard) ಮೂಲಕ ಅರ್ಥಮಾಡಿಕೊಳ್ಳಬಹುದಾಗಿದೆ. ಅದೇ ರೀತಿಯಲ್ಲಿ, ಲಿಂಗ ತಾರತಮ್ಯ ಅಥವಾ ದಬ್ಬಾಳಿಕೆಯ ಬಗ್ಗೆ ಈ ಹಿಂದೆ ವಿವರಿಸಿದ ಯಾವುದೇ ಸಿದ್ಧಾಂತವು ಅತ್ಯಂತ ಸೂಕ್ತ ಅಥವಾ ಉಪಯುಕ್ತವಾಗಿದ್ದಾಗಲೂ ಶ್ರೇಣೀಕರಣದ ಸಿದ್ಧಾಂತಗಳಲ್ಲಿ ಅಲಕ್ಷ್ಯಕ್ಕೆ ಒಳಗಾಗಿರುವ ಪ್ರಮುಖ ಅಂಶವೊಂದಿದ್ದು, ಅದು ಹೀಗಿದೆ: ನಿರ್ದಿಷ್ಟ ಸಮಾಜದಲ್ಲಿನ ಸಾಮಾಜಿಕ ಸ್ತರ-ವಿನ್ಯಾಸ ವ್ಯವಸ್ಥೆಯ ಅತ್ಯಂತ ಪ್ರಮುಖ ವರ್ಗ ಶ್ರೇಣಿಯ ಮೂಲಕ ಲಿಂಗಾಧಾರಿತ ಸ್ಥಾನಮಾನಗಳ ಅಸಮಾನತೆಗಳ ಪರಿಚಾಲನೆಯು ಮುಂದುವರಿಯುತ್ತದೆ (ಫೆರೀ ಮತ್ತು ಹಾಲ್ 1996). ಬೇರೆ ಮಾತುಗಳಲ್ಲಿ ಹೇಳುವುದಾದರೆ, ಸ್ತ್ರೀ ಪುರುಷರ ನಡುವಿನ ಆದಾಯದ ಅಸಮಾನತೆಗಳನ್ನು ನಮ್ಮ ಸಮಾಜದಲ್ಲಿನ ಲಿಂಗಭೇದಭಾವ ಮತ್ತು ಮಹಿಳೆಯರ ವಿರುದ್ಧದ ತಾರತಮ್ಯದ ಚಾರಿತ್ರಿಕ ಪರಿಸ್ಥಿತಿಗಳ ಮೂಲಕ ವಿವರಿಸಬಹುದು (ಇಂಗ್ಲೆಂಡ್ ಮತ್ತು ಇತರರು, 1988, ಇಂಗ್ಲೆಂಡ್ ಮತ್ತು ಫರ್ಕಾಸ್ 1986). ಜನಾಂಗೀಯವಾದದಂತೆ, ಲಿಂಗಭೇದಭಾವವು

ಸ್ಥಾಪಿತಗೊಂಡಲ್ಲಿ (establish), ಈ ಬಹುತೇಕ ಲಿಂಗಾಧಾರಿತ ತಾರತಮ್ಯವು ಸ್ಥಾಪಿತ ವರ್ಗ ವ್ಯವಸ್ಥೆಯ ಮೂಲಕ ಸಂಚಾಲಿತಗೊಳ್ಳುತ್ತದೆ (ರೈಟ್ 1997, ಅಧ್ಯಾಯ 9; ಫೆರೀ ಮತ್ತು ಹಾಲ್ 1996).

ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲ್ಪಟ್ಟ ಹಲವು ಅಧ್ಯಯನಗಳು ತೋರುವಂತೆ, ವೃತ್ತಿಪರ ಕೌಶಲದ ಜೊತೆಗೆ ಆದಾಯದ ಅಸಮಾನತೆಯು ಸಾಧಾರಣತಃ, ಅಧಿಕಾರದ ಸ್ವರೂಪಗಳಲ್ಲಿನ ಸ್ಥಾನ, ಉತ್ಪಾದನಾ ಸಂಪನ್ಮೂಲಗಳ ಮಾಲೀಕತ್ವ, ಅಂಚಿನಲ್ಲಿನ ಹಾಗೂ ಕೇಂದ್ರದಲ್ಲಿನ ಉದ್ಯೋಗಗಳು ಮತ್ತು ಸಂಘೀಕರಣಕ್ಕೆ (unionization) ಸಂಬಂಧಿಸಿದೆ. ಹೀಗೆ, ಸಾಧಾರಣತಃ, ಆದಾಯದ ಅಸಮಾನತೆಯನ್ನು ಪ್ರಭಾವಿಸುವ ಈ ಇತರೆ ಅಂಶಗಳೊಂದಿಗೆ ಲಿಂಗಾಧಾರಿತ ವ್ಯತ್ಯಾಸಗಳನ್ನು ನಾವು ಕಂಡುಕೊಂಡಲ್ಲಿ, ವರ್ಗ ವ್ಯವಸ್ಥೆಯ ಮೂಲಕ ಸಂಚಾಲನಗೊಳ್ಳುವ ಲಿಂಗಾಧಾರಿತ ಅಸಮಾನತೆಯ ಇತರೆ ಮೂಲಗಳನ್ನು ನಾವು ಪತ್ತೆಹಚ್ಚಿದಂತಾಗುತ್ತದೆ. ಹಲವು ಅಧ್ಯಯನಗಳು ಇದೇ ವಾಸ್ತವವೆಂಬುದಾಗಿ ತಿಳಿಸಿವೆ.

ಎರಡನೆಯ ಅಧ್ಯಾಯದಲ್ಲಿ ಮಹಿಳೆಯರು ಮತ್ತು ಅಲ್ಪಸಂಖ್ಯಾತರು ಬಿಳಿಯ ಪುರುಷರಿಗಿಂತ ಕೆಳಮಟ್ಟದ ಔದ್ಯೋಗಿಕ ಸ್ಥಾನಮಾನವನ್ನು ಹೊಂದಿರುವುದನ್ನು ನಾವೀಗಾಗಲೇ ಗಮನಿಸಿದ್ದೇವೆ. ಕಾರಣಗಳು ಏನೇ ಇರಲಿ, ಹೀಗೆ ಔದ್ಯೋಗಿಕ ಸ್ವರೂಪದಲ್ಲಿ ಉನ್ನತ ಸ್ಥಾನಮಾನಗಳಿಂದ ಹೊರಗುಳಿಸುವಿಕೆಯು ಆದಾಯ ಮತ್ತು ಇತರೆ ಪ್ರಕಾರದ ಅಸಮಾನತೆಗಳನ್ನು ಉಂಟುಮಾಡುತ್ತದೆ. ಆದರೆ, ಎರಡನೇ ಅಧ್ಯಾಯದ ಕೋಷ್ಟಕ 2-3ರಲ್ಲಿ ನಾವು, ಮಹಿಳೆಯರು ಪುರುಷರಷ್ಟೇ ಔದ್ಯೋಗಿಕ ಸ್ಥಾನಮಾನ ಮತ್ತು ಶಿಕ್ಷಣವನ್ನು ಹೊಂದಿದ್ದಾಗ್ಯೂ, ಅವರ ಆದಾಯವು ಕಡಿಮೆಯೆಂಬುದನ್ನು ಸಹ ನೋಡಿದ್ದೇವೆ. ಈ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಅಧ್ಯಾಯ -5ರಲ್ಲಿ ಮೊದಲು ವಿವರಿಸಲಾದ ರೈಟ್‌ನ ವರ್ಗಾಧಾರಿತ ಶ್ರೇಣಿಗಳಿಗೆ (ರೈಟ್ 1997, 1978ಎ, 1978ಬಿ; ರೈಟ್ ಮತ್ತು ಪೆರೋನ್ 1977; ರೈಟ್ ಮತ್ತು ಇತರರು 1982; ರೈಟ್ ಮತ್ತು ಮಾರ್ಟಿನ್ 1987) ಹಿಂದಿರುಗಬೇಕು.

ಅಧಿಕಾರ ಸ್ಥಾನಗಳಲ್ಲಿ ವರ್ಗದ ಜನಾಂಗೀಯ ಹಾಗೂ ಲಿಂಗಾಧಾರಿತ ಹಂಚಿಕೆಯನ್ನು ಪಡರಿಗಣಿಸಿ, ಕೋಷ್ಟಕ 10-10, ಕರಿಯ ಗಂಡಸರು, ಬಿಳಿಯ ಮತ್ತು ಕರಿಯ ಮಹಿಳೆಯರು ರೈಟ್ ಹೇಳಿದ ದುಡಿಯುವ ವರ್ಗ ಅಥವಾ ಕೌಶಲರಹಿತ ಗುಂಪಿಗೆ ಸೇರಿದವರಾಗುತ್ತಾರೆ ಎಂಬುದನ್ನು ತಿಳಿಸುತ್ತದೆ ( ರೈಟ್ 1997:68; ರೈಟ್ ಮತ್ತು ಪೆರೋನ್ 1977; ರೈಟ್ ಮತ್ತು ಇತರರು 1982; ರಾಬಿನ್‌ಸನ್ ಮತ್ತು ಕೆಲ್ಲಿ 1979). ವಿಶೇಷವಾಗಿ ಕರಿಯ ಮತ್ತು ಬಿಳಿಯ ಮಹಿಳೆಯರಲ್ಲಿ ಇದನ್ನು ಕಾಣಬಹುದು. ಏಕೆಂದರೆ, ಈ ದುಡಿಯುವ ವರ್ಗದ ಶ್ರೇಣಿಯು, ಕಾರಕೂನ ಹಾಗೂ ಸೇವಾ ಕ್ಷೇತ್ರದ ಕೆಲಸಗಾರರಿಬ್ಬರನ್ನೂ ಒಳಗೊಂಡಿರುತ್ತದೆ. ನಂತರ, ಪಟ್ಟಿಯ ಮೇಲ್ತುದಿಯ ವಿಭಾಗಗಳಲ್ಲಿ ಬಿಳಿಯ ಗಂಡಸರ ಪ್ರಾಬಲ್ಯವನ್ನು ಕಾಣಬಹುದು. ಆದರೆ ಕೋಷ್ಠಕ 10-10ರಲ್ಲಿನ ಈ ವರ್ಗಶ್ರೇಣಿಯ ಕೆಳಭಾಗದಲ್ಲಿ ಕಣ್ಣು ಹಾಯಿಸಿದಂತೆಲ್ಲಾ ಹೆಚ್ಚಾಗಿ ಹೆಣ್ಣು ಮಕ್ಕಳು ಮತ್ತು ಕರಿಯರು ಕಂಡುಬರುತ್ತಾರೆ.

| ಕೋಷ್ಟಕ 10-10 | | | | | |
|---|---|---|---|---|---|
| ಜನಾಂಗ ಹಾಗೂ ಲಿಂಗಾಧಾರಿತ ವರ್ಗ ಶ್ರೇಣಿಗಳು ( ಮಾಲೀಕತ್ವ, ಅಧಿಕಾರ, ಕೌಶಲ್ಯದ ಮಟ್ಟ) | | | | | |
| | | ಬಿಳಿಯರು | | ಕರಿಯರು | |
| | | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| 1 | ಬಂಡವಾಳಗಾರರು | 3.0% | 0.7% | 0.0% | 0.0% |
| 2 | ಸಣ್ಣ ಉದ್ಯೋಗದಾತರು | 8.2 | 4.9 | 0.0 | 1.3 |
| 3 | ಸಣ್ಣಪುಟ್ಟ ಬಂಡವಾಳಗಾರರು | 6.4 | 8.8 | 3.6 | 0.0 |
| | ಒಟ್ಟು ಸ್ವಂತ ಉದ್ಯೋಗಿಗಳು | 17.6 | 14.4 | 3.6 | 1.3 |
| 4 | ತಜ್ಞ ಆಡಳಿತಗಾರರು | 8.5 | 2.8 | 5.1 | 0.0 |

| | | | | | |
|---|---|---|---|---|---|
| 5 | ಕುಶಲ ಆಡಳಿತಗಾರರು | 5.7 | 2.4 | 2.0 | 0.0 |
| 5 | ಕೌಶಲ್ಯರಹಿತ ಆಡಳಿತಗಾರರು | 2.3 | 3.9 | 1.0 | 6.3 |
| 7 | ತಜ್ಞ ಮೇಲ್ವಿಚಾರಕರು | 4.2 | 1.7 | 1.3 | 1.7 |
| 8 | ಕುಶಲ ಮೇಲ್ವಿಚಾರಕರು | 7.9 | 4.3 | 7.5 | 2.0 |
| 9 | ಕೌಶಲ್ಯರಹಿತ ಮೇಲ್ವಿಚಾರಕರು | 5.0 | 9.3 | 4.6 | 7.7 |
| 10 | ತಜ್ಞರು | 3.2 | 3.5 | 2.9 | 1.8 |
| 11 | ಕುಶಲ ಕೆಲಸಗಾರರು | 17.4 | 7.7 | 23.3 | 10.9 |
| 12 | ಕೌಶಲ್ಯರಹಿತ ಕೆಲಸಗಾರರು | 28.2 | 50.೦ | 47.7 | 68.4 |

ಮೂಲ: ರೈಟ್ (1997:68)

ಅಲ್ಪಮಟ್ಟದ ಅಧಿಕಾರ ಮತ್ತು ಮಾಲೀಕತ್ವವು ಅಲ್ಪಸಂಖ್ಯಾತರ ಹಾಗೂ ಮಹಿಳೆಯರ ಗಮನಾರ್ಹ ಅಲ್ಪ ಆದಾಯವನ್ನು ವಿವರಿಸುತ್ತವೆಂದು ಹಲವು ಅಧ್ಯಯನಗಳು ತೋರಿಸಿಕೊಟ್ಟಿವೆ (ರೈಟ್ ಮತ್ತು ಪೆರೋನ್ 1977; ರೈಟ್ 1997; ಕ್ಲೂಗೆಲ್ 1978; ರೈಟ್ 1978ಬಿ, 1979; ವುಲ್ಫ್ ಮತ್ತು ಫ್ಲಿಗ್‌ಸ್ಟಿಸ್ಟಿನ್ 1979; ಟ್ರೇಮನ್ ಮತ್ತು ರೂಸ್ 1983). ಎಂಟನೆಯ ಅಧ್ಯಾಯದಲ್ಲಿ ದ್ವಿಮುಖ ಆರ್ಥಿಕ ವ್ಯವಸ್ಥೆಯಡಿಯಲ್ಲಿ ಕೇಂದ್ರದಲ್ಲಿ ಹಾಗೂ ಅಂಚಿನಲ್ಲಿರುವ ಸ್ಥಾನಗಳು, ಉದ್ಯೋಗ ಭದ್ರತೆ, ಬಡ್ತಿಯ ಬದಲಾವಣೆಗಳು ಮತ್ತು ನಿಸ್ಸಂದೇಹವಾಗಿ ಆದಾಯದ ಅಸಮಾನತೆಗಳ ಮೇಲೆ ಪ್ರಭಾವವನ್ನು ಬೀರುವುದನ್ನು ಸಹ ಗಮನಿಸಿದ್ದೇವೆ. ಹಲವು ಸಂಶೋಧನೆಗಳು ಹೇಳುವಂತೆ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಆದಾಯವು ಕಡಿಮೆಯಿರುವುದರ ಭಾಗಶಃ ಕಾರಣ, ಅವರು ಮತ್ತೆ ಮತ್ತೆ ಅಂಚಿನಲ್ಲಿನ ಉದ್ಯಮಗಳಲ್ಲಿ ನಿಯೋಜಿತರಾಗುವುದು (ಬೆಕ್, ಹೊರಾನ್, ಮತ್ತು ಟಾಲ್ಬರ್ಟ್ 1978; ಟಾಲ್ಬರ್ಟ್ 1978; ಟಾಲ್ಬರ್ಟ್, ಹೊರಾನ್, ಮತ್ತು ಬೆಕ್ 1980; ಕಾಫ್‌ಮನ್ 1983). ಮಹಿಳೆಯರು ಮತ್ತು ಅಲ್ಪಸಂಖ್ಯಾತರು ಹೆಚ್ಚಾಗಿ ಅಲ್ಪಮಟ್ಟದ ಸಂಘಟನೆಗಳಿರುವ ಉದ್ಯಮಗಳಲ್ಲಿ ನಿಯುಕ್ತರಾಗಿರುತ್ತಾರೆಂಬುದನ್ನು ಇತರೆ ಅಧ್ಯಯನಗಳು ಹೆಚ್ಚು ನೇರವಾಗಿ ಅಭಿವ್ಯಕ್ತಿಸುವುದರೊಂದಿಗೆ, ಅಂತಿಮವಾಗಿ, ದ್ವಿಮುಖ ಆರ್ಥಿಕತೆಯ ಬಗೆಗಿನ ಸಂಶೋಧನೆಯು ಸಂಘಟೀಕರಣಕ್ಕೂ (unionization) ಮಹಿಳೆಯರ ಹಾಗೂ ಅಲ್ಪಸಂಖ್ಯಾತರ ಆದಾಯ ಕೆಳಮಟ್ಟದಲ್ಲಿರುವುದಕ್ಕೂ ಸಂಬಂಧವಿದೆ ಎಂಬುದನ್ನು ಸೂಚಿಸುತ್ತದೆ (ಬೆಕ್, ಹೊರಾನ್ ಮತ್ತು ಟಾಲ್ಬರ್ಟ್ 1980).

ಆದಾಗ್ಯೂ, ಸರಳ ತಾರತಮ್ಯದಂತಹ ಹೆಚ್ಚಿನ ಸಾಂಪ್ರದಾಯಿಕ ಸಂಗತಿಗಳು ಆದಾಯದಲ್ಲಿನ ಲಿಂಗಾಧಾರಿತ ಅಸಮಾನತೆಗಳಿಗೆ ಕಾರಣಗಳಾಗಿವೆ. ಅಧಿಕಾರ ಸ್ಥಾನ, ಉದ್ಯೋಗದ ಅವಧಿ, ಶೈಕ್ಷಣಿಕ ಮಟ್ಟ ಮುಂತಾಗಿ, ಆದಾಯದಲ್ಲಿ ಲಿಂಗಾಧಾರಿತ ಮತ್ತು ಜನಾಂಗೀಯ ಅಸಮಾನತೆಗಳಿಗೆ ಕಾರಣವೆನಿಸಿದ ಎಲ್ಲ ಅಂಶಗಳನ್ನು ಈ ಅಧ್ಯಯನಗಳು ಪರಿಗಣಿಸುತ್ತವೆ. ಆದಾಯದಲ್ಲಿನ ವ್ಯತ್ಯಾಸಗಳಿಗೆ ಜನಾಂಗೀಯತೆ ಮತ್ತು ಲಿಂಗಭೇದಭಾವಗಳೇ ಕಾರಣವೆಂಬುದನ್ನು ಅವರು ಪತ್ತೆಹಚ್ಚಿದ್ದಾರೆ (ಇಂಗ್ಲೆಂಡ್ ಮತ್ತು ಇತರರು 1988; ಪಾರ್ಸೆಲ್ ಮತ್ತು ಮ್ಯೂಲರ್ 1989; ವೆಲ್ಲಿಂಗ್‌ಟನ್ 1994; ವಾಲ್ಡ್‌ಫೊಜೆಲ್ 1997). ಒಂದು ವಿಸ್ತೃತ ಅಧ್ಯಯನವು 'ಮಹಿಳೆಯರ ಕೆಲಸಗಳು' ಎಂಬ ಹಣೆಪಟ್ಟಿಯನ್ನು ಹೊತ್ತ ಉದ್ಯೋಗಗಳು; ಶೈಕ್ಷಣಿಕ ಹಾಗೂ ವೃತ್ತಿಪರ ಕೌಶಲ್ಯದ ಮಟ್ಟ, ಅಧಿಕಾರ ಮತ್ತಿತರೆ ಅಂಶಗಳ ಹೊರತಾಗಿಯೂ ಸಾಮಾನ್ಯತಃ, ಆದಾಯದ ಗಳಿಕೆಯೊಂದಿಗೆ ಸಹ-ಸಂಬಂಧವನ್ನು ಹೊಂದಿದೆವೆಯೆಂಬುದನ್ನು ವ್ಯಕ್ತಪಡಿಸಿದೆ (ಮೆಕ್‌ಲಫ್ಲಿನ್ 1978; ಬೆಲ್ಲಾಸ್ 1994). ಮಹಿಳೆಯರು ಮತ್ತು ಪುರುಷರು ಒಂದೇ ಉದ್ಯೋಗವನ್ನು ನಿರ್ವಹಿಸಿದಾಗ್ಯೂ, ಮಹಿಳೆಯರಿಗೆ ಕಡಿಮೆ ವೇತನದೊಂದಿಗೆ ವಿಭಿನ್ನ ಉದ್ಯೋಗ ಶೀರ್ಷಿಕೆಯನ್ನು (job title) ನೀಡಲಾಗುತ್ತದೆಂಬುದನ್ನು ಇತರೆ ಅಧ್ಯಯನಗಳು ಕಂಡುಕೊಂಡಿವೆ (ಬೀಲ್ಬೀ

ಮತ್ತು ಬೇರನ್ 1986; ಪೀಟರ್ಸನ್ ಮತ್ತು ಮೋರ್ಗನ್ 1995). ತಮ್ಮ ವಿಸ್ತೃತ ಅಧ್ಯಯನದಲ್ಲಿ ಮಾರಿನಿ ಮತ್ತು ಫ್ಯಾನ್ (1997) ಅವರುಗಳು, ಮಹಿಳೆಯರ ವ್ಯಕ್ತಿಗತ ಗುಣವಿಶೇಷಗಳು ಅಥವಾ ಶಿಕ್ಷಣ ಮಟ್ಟ, ಉದ್ಯೋಗ ಕೌಶಲಗಳು ಮತ್ತು ಮಹತ್ವಾಕಾಂಕ್ಷೆಗಳಂತಹ ಮಾನವ ಸಂಪತ್ತಿನ ವ್ಯತ್ಯಾಸ ಸಾಧ್ಯಗಳು ಜನರ ಮೊದಲನೇ ಉದ್ಯೋಗದ ವೇತನದಲ್ಲಿನ ಲಿಂಗಾಧಾರಿತ ಅಂತರದ ಅರ್ಧಕ್ಕಿಂತಲೂ ಕಡಿಮೆಯಿರುತ್ತವೆ ಎಂಬುದನ್ನು ಕಂಡುಕೊಂಡಿದ್ದಾರೆ. ಇದಕ್ಕೆ ವಿರುದ್ಧವಾಗಿ, ಬಹಳಷ್ಟು ಬಾರಿ ಮಹಿಳೆಯರನ್ನು ಹೊರಪಡಿಸಲಾದ ಉದ್ಯೋಗ ಜಾಲಗಳು ಮತ್ತು ಕಾರ್ಪೋರೇಷನ್‌ಗಳ ಗುಣವಿಶೇಷಗಳು ಮತ್ತು ಪದ್ಧತಿಗಳು ಮಹಿಳೆಯರ ಆದಾಯದಲ್ಲಿನ ವ್ಯತ್ಯಾಸಗಳಿಗೆ ಸುಮಾರು ಶೇ.೪೦ರಷ್ಟು ಕಾರಣವೆನಿಸಿವೆ.

ಭವಿಷ್ಯತ್ತಿನಲ್ಲಿ ಲಿಂಗಾಧಾರಿತ ಅಸಮಾನತೆಗಳು ಕಡಿಮೆಯಾಗುವ ಕೆಲವು ಸೂಚನೆಗಳಿವೆ. ಉದಾಹರಣೆಗೆ, ನಾವು ನೋಡಿರುವಂತೆ, ಪರಂಪರಾಗತವಾಗಿ, ಪುರುಷರ ಕೆಲಸಗಳೆಂದು ಭಾವಿಸಿದ್ದ ಕೆಲಸಗಳು ಮಹಿಳೆಯರಿಂದ ನಿರ್ವಹಿಸಲ್ಪಡುವುದು ಗಮನಾರ್ಹವಾಗಿ ಹೆಚ್ಚುತ್ತಿದೆ. ಕಾಲೇಜು ಮಹಿಳೆಯರು ಆಯ್ಕೆಮಾಡುವ ಅಧ್ಯಯನದ ಕ್ಷೇತ್ರಗಳಲ್ಲಿ ಪ್ರಮುಖ ಬದಲಾವಣೆಗಳನ್ನು ನಾವು ಗಮನಿಸಿದ್ದೇವೆ. ಇದು ಬಹುಶಃ ಹೆಚ್ಚು ಗಮನಾರ್ಹವಾದುದು. ಶಿಕ್ಷಣ, ಗೃಹ ಅರ್ಥಶಾಸ್ತ್ರ, ಮನರಂಜನೆ ಅಥವಾ ಸಮಾಜ ಕಾರ್ಯಗಳನ್ನು ಮಹಿಳೆಯರು ಕೇವಲ ಪದವಿಗಾಗಿ ಓದುತ್ತಿಲ್ಲ. ಅನೇಕ ಮಹಿಳೆಯರೀಗ ಪರಂಪರಾನುಗತವಾಗಿ ಪುರುಷ ಪ್ರಾಬಲ್ಯದ ವಿಷಯಗಳೆನಿಸಿದ್ದ ಕಾನೂನು, ವೈದ್ಯ ವಿಜ್ಞಾನ, ಇಂಜಿನಿಯರಿಂಗ್, ಅಕೌಂಟಿಂಗ್ ಮತ್ತಿತರ ವಿಷಯಗಳ ಅಧ್ಯಯನದಲ್ಲಿ ತೊಡಗುತ್ತಾರೆ.

ಇಷ್ಟಾದರೂ, ಅಧಿಕಾರ ರಚನೆಯಲ್ಲಿ ಸುಧಾರಣೆಯು ಅಲ್ಪ ಪ್ರಮಾಣದಲ್ಲಿದೆ ಎಂಬುದಕ್ಕೆ ಇತರೆ ಕುರುಹುಗಳಿವೆ. ಮಹಿಳೆಯರು ಮತ್ತು ಅಲ್ಪಸಂಖ್ಯಾತರ ನಿಟ್ಟಿನ ಈ ರೀತಿಯ ಇತಿಮಿತಿಗಳನ್ನು 'ಗಾಜಿನ ಪರಿಮಿತಿಯ' (glass ceiling) ಪರಿಕಲ್ಪನೆಯೊಂದಿಗೆ ವಿವರಿಸಲಾಗುತ್ತದೆ. ಮಹಿಳೆಯರು ಮತ್ತು ಅಲ್ಪಸಂಖ್ಯಾತರು ವೃತ್ತಿಪರ ಸ್ಥಾನಮಾನದಲ್ಲಿ ಸ್ವಲ್ಪ ಸುಧಾರಣೆಯನ್ನು ತೋರ್ಪಡಿಸುತ್ತಿದ್ದು, ಪ್ರಮುಖ ಸರ್ಕಾರಿ ಹಾಗೂ ಕಾರ್ಪೋರೇಟ್ ಅಧಿಕಾರವರ್ಗದಲ್ಲಿನ ಅಧಿಕಾರದ ಉನ್ನತ ಸ್ಥಾನಗಳಿಗೆ ಸಂಚಾಲಿತಗೊಳ್ಳುತ್ತಿದ್ದಾಗ್ಯೂ, ಈ ಅಧಿಕಾರ ರಚನೆಯ ಅತ್ಯಂತ ಉನ್ನತ ಸ್ಥಾನಗಳಿಂದ ಈಗಲೂ ಇವರನ್ನು ಹೊರಪಡಿಸಲಾಗಿದ್ದು, ಗಾಜಿನ ಪರಿಮಿತಿಯನ್ನು ಮೀರಲು ಇವರಿಗೆ ಸಾಧ್ಯವಾಗುತ್ತಿಲ್ಲ ಎಂಬುದಾಗಿ ಈ ಪರಿಕಲ್ಪನೆಯು ತಿಳಿಸುತ್ತದೆ.

ಈ ಗಾಜಿನ ಪರಿಮಿತಿಯ ಪರಿಣಾಮಗಳಿಗೆ ಮತ್ತಷ್ಟು ಪುರಾವೆಗಳಿಗಾಗಿ ಜಗತ್ತಿನಾದ್ಯಂತ ಪ್ರಮುಖ ದೇಶಗಳಲ್ಲಿ ಸಾಮಾಜಿಕ ಸ್ತರೀಕರಣವನ್ನು ಕುರಿತಂತೆ ರೈಟ್ (1997) ಅವರು ಕೈಗೆತ್ತಿಕೊಂಡ ಬೃಹತ್ ಸಂಶೋಧನೆಗೆ ನಾವು ಮರಳಬಹುದು. ಕೋಷ್ಟಕ 10-11, ದೊಡ್ಡ ಸಂಸ್ಥೆಗಳಲ್ಲಿನ ಅಧಿಕಾರದ ಹಲವು ಹಂತಗಳಲ್ಲಿ ಪುರುಷರು ಮತ್ತು ಮಹಿಳೆಯರು ಎಷ್ಟಿದ್ದಾರೆ ಎಂಬುದನ್ನು ತೋರ್ಪಡಿಸುತ್ತದೆ. ಮುಖ್ಯ ವ್ಯವಸ್ಥಾಪಕನದು ಅತಿ ದೊಡ್ಡ ಸ್ಥಾನವೆನಿಸಿದೆ. ಆ ನಂತರ ಮೇಲುದರ್ಜೆಯ ವ್ಯವಸ್ಥಾಪಕ, ನಂತರದಲ್ಲಿ ಮೇಲ್ವಿಚಾರಕ ಹಾಗೂ ಅಂತಿಮವಾಗಿ ಆಡಳಿತೇತರ ಸ್ಥಾನಗಳಿರುತ್ತವೆ. 10-11ರ ಕೋಷ್ಟಕದಲ್ಲಿ ತೋರಿಸಿರುವಂತೆ, ದತ್ತಾಂಶ ಸಮುಚ್ಚಯದ ಏಳು ಔದ್ಯಮಿಕ ರಾಷ್ಟ್ರಗಳಲ್ಲಿ ಸಾಮಂಜಸ್ಯವಿದೆ; ಮಹಿಳೆಯರು ಆಡಳಿತೇತರ ಸ್ಥಾನಗಳಲ್ಲಿರುವ ಸಾಧ್ಯತೆ ಹೆಚ್ಚಾಗಿದ್ದು, ಕೆಲವರು ಉನ್ನತ ವ್ಯವಸ್ಥಾಪಕ ಸ್ಥಾನಗಳಲ್ಲಿದ್ದಾರೆ. ಈ ಇತರೆ ಸಮಾಜಗಳಲ್ಲಿನ ಮಹಿಳೆಯರಿಗೆ ಹೋಲಿಸಿದಲ್ಲಿ, ಅಮೆರಿಕದ ಮಹಿಳೆಯರು ಈ ವಿಷಯದಲ್ಲಿ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದಾರಾದರೂ, 'ಸ್ವಲ್ಪ ಮಟ್ಟಿಗೆ' ಮಾತ್ರ ಎನ್ನುವುದಕ್ಕೆ ನಾವು ಒತ್ತು ನೀಡತಕ್ಕದ್ದು.

**ಕೋಷ್ಟಕ 10-11**

**ವ್ಯವಸ್ಥಾಪಕ ಸ್ಥಾನಗಳಲ್ಲಿನ ಸ್ತ್ರೀ ಮತ್ತು ಪುರುಷರ ತುಲನಾತ್ಮಕ ದತ್ತಾಂಶ**

| | | ಅತ್ಯುನ್ನತ ನಿರ್ವಾಹಕರು | | ಉನ್ನತ ನಿರ್ವಾಹಕರು | | ನಡು ಹಂತದ ನಿರ್ವಾಹಕರು | | ಕೆಳ ಹಂತದ ನಿರ್ವಾಹಕರು | | ಮೇಲ್ವಿಚಾರಕರು | | ಆಡಳಿತೇತರ | | | |
|---|---|---|---|---|---|---|---|---|---|---|---|---|---|---|---|
| | | ಗಂಡು % | ಹೆಣ್ಣು % | ಗಂಡು % | ಹೆಣ್ಣು % | ಗಂಡು % | ಹೆಣ್ಣು % | ಗಂಡು % | ಹೆಣ್ಣು % | ಗಂಡು % | ಹೆಣ್ಣು % | ಗಂಡು % | ಹೆಣ್ಣು % | ಗಂಡು | ಹೆಣ್ಣು |
| 1 | ಅಮೆರಿಕ | 3.3 | 2.8 | 4.5 | 1.5 | 5.7 | 3.6 | 3.3 | 2.2 | 20.7 | 15.9 | 62.4 | 74.1 | 622 | 539 |
| 2 | ಆಸ್ಟ್ರೇಲಿಯ | 3.0 | 1.9 | 5.9 | 2.1 | 8.7 | 4.1 | 2.4 | 2.6 | 30.3 | 29.1 | 49.6 | 60.1 | 492 | 419 |
| 3 | ಯುನೈಟೆಡ್ ಕಿಂಗ್‌ಡಮ್ | 3.9 | 0.9 | 1.2 | 0.2 | 8.6 | 1.8 | 4.9 | 1.1 | 20.2 | 18.4 | 61.3 | 77.6 | 594 | 456 |
| 4 | ಕೆನಡಾ | 3.7 | 0.9 | 5.2 | 0.9 | 5.4 | 3.0 | 2.3 | 2.0 | 18.9 | 11.9 | 64.6 | 81.2 | 785 | 639 |
| 5 | ಸ್ವೀಡನ್ | 1.9 | 1.0 | 2.3 | 0.0 | 6.2 | 1.7 | 4.9 | 2.6 | 18.8 | 11.1 | 65.9 | 83.7 | 531 | 416 |
| 6 | ನಾರ್ವೆ | 5.0 | 0.9 | 5.5 | 0.9 | 5.1 | 0.5 | 0.5 | 0.2 | 23.4 | 8.3 | 60.6 | 89.3 | 822 | 581 |
| 7 | ಜಪಾನ್ | 1.2 | 0.0 | 4.3 | 0.0 | 2.8 | 0.0 | 1.6 | 0.0 | 37.2 | 3.5 | 53.0 | 96.5 | 253 | 173 |

ಮೂಲ: ರೈಟ್ (1997:337).

ಅಮೆರಿಕದಂಥ ಔದ್ಯೋಗಿಕ ಸಮಾಜಗಳಲ್ಲಿನ ವರ್ಗ ವಿನ್ಯಾಸದಲ್ಲಿ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಸ್ಥಾನಕ್ಕೆ ಊರ್ಧ್ವಮುಖ ಸಾಮಾಜಿಕ ಚಲನೆಯನ್ನು ಕುರಿತ ಅವಕಾಶಗಳು ಮತ್ತು ನಿರ್ಬಂಧಗಳಿಗೆ ಸಂಬಂಧಿಸಿದಂತೆ ಪ್ರಮುಖವೆನಿಸಿದ ಅಂತಿಮ ಅಧ್ಯಾಯವೊಂದನ್ನು ನಾವು ಹೊಂದಿದ್ದೇವೆ. ಸ್ಥಾಪಿತ ವರ್ಗ ವಿಭಾಗಗಳ ಮೂಲಕ ಜನಾಂಗೀಯತೆ, ಲಿಂಗಭೇದಭಾವ ಮತ್ತು ತಾರತಮ್ಯಗಳ ಪರಂಪರಾಗತ ಮೂಲಗಳು ಪರಿಚಾಲಿತಗೊಳ್ಳುತ್ತವೆಂಬುದನ್ನು ನಾವು ಮತ್ತೊಮ್ಮೆ ಕಂಡುಕೊಳ್ಳುತ್ತೇವೆ. ಆದರೆ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಪರಿಸ್ಥಿತಿಗಳನ್ನು ಪರಿಗಣಿಸುವ ಮೊದಲು, ಅಧ್ಯಾಯ 12ರಲ್ಲಿನ ಸಾಮಾಜಿಕ ಚಲನೆ ಮತ್ತು ಸ್ಥಾನಮಾನದ ಪ್ರಾಪ್ತಿಯ ಪ್ರಶ್ನೆಯನ್ನು ಎಲ್ಲರಿಗೂ ಅನ್ವಯಿಸುವ ನಿಟ್ಟಿನಲ್ಲಿ ನಾವು ಪರಿಗಣಿಸತಕ್ಕದ್ದು..

**ಸಾರಾಂಶ**

ಈ ಅಧ್ಯಾಯದ ಪ್ರಾರಂಭದಲ್ಲಿ ಲಿಂಗಾಧಾರಿತ ವ್ಯತ್ಯಾಸಗಳ ಮೂಲಭೂತ ವಿವರಣೆಗಳನ್ನು ಒದಗಿಸಿದ ನಂತರ ಈ ಅಧ್ಯಾಯವು, ಅಮೆರಿಕದ ಮಹಿಳೆಯರ ಅಸಮಾನತೆಯ ಹಂತದೊಂದಿಗೆ ಪ್ರಾರಂಭಗೊಂಡಿತು. ಅಮೆರಿಕದಲ್ಲಿ ಲಿಂಗಾಧಾರಿತ ಅಸಮಾನತೆಯ ಹಂತಗಳಲ್ಲಿ ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದೆ ಎಂಬುದನ್ನು ನಾವು ಗಮನಿಸಿದಾಗ್ಯೂ, ಗಮನಾರ್ಹ ಅಸಮಾನತೆಯು ಹಾಗೆಯೇ ಉಳಿದಿದೆ. ಕಡಿಮೆಯಾಗುತ್ತಿರುವ ಲಿಂಗಾಧಾರಿತ ಆದಾಯಕ್ಕೆ ಸಂಬಂಧಿಸಿದಂತೆ; ಇತ್ತೀಚಿನ ವರ್ಷಗಳಲ್ಲಿ, ಪ್ರಮುಖವಾಗಿ ಪುರುಷರ ಆದಾಯವು ಕೆಳಮಟ್ಟಕ್ಕೆ ಇಳಿಯುತ್ತಿರುವ ಕಾರಣದಿಂದಾಗಿ, ಸ್ತ್ರೀ ಪುರುಷರ ನಡುವೆ ಆದಾಯದ ಅಸಮಾನತೆಯು ಕಡಿಮೆಯಾಗುತ್ತಿದೆ ಎಂಬುದನ್ನು ನಾವು ಕಂಡುಕೊಂಡಿದ್ದೇವೆ. ಈ ಅಸಮಾನತೆಯು, ಬಹುತೇಕ ಇತರೆ ಸಮಾಜಗಳಿಗಿಂತಲೂ ಅಮೆರಿಕದ ಸಮಾಜದಲ್ಲಿ ಕಡಿಮೆಯಾಗುತ್ತಿದೆಯಾದರೂ ಹಲವು ಔದ್ಯಮಿಕ ರಾಷ್ಟ್ರಗಳಿಗಿಂತ ಹೆಚ್ಚಿನ ಮಟ್ಟದಲ್ಲಿದೆ.

ಅಮೆರಿಕ ಮತ್ತು ಪ್ರಪಂಚದಲ್ಲಿನ ಲಿಂಗಾಧಾರಿತ ಅಸಮಾನತೆಗಳ ವಿಸ್ತೃತ ಚಾರಿತ್ರಿಕ ಚರ್ಚೆಯ ನಂತರ, ಅಧ್ಯಾಯವು ಲಿಂಗ ಅಸಮಾನತೆಗಳ ಬಗೆಗಿನ ಪ್ರಮುಖ ಸಿದ್ಧಾಂತಗಳನ್ನು ಚರ್ಚಿಸಿತು. ಕೆಲವು ಹೊಸ ಸ್ತ್ರೀವಾದಿ ಚಿಂತನೆಗಳೊಂದಿಗೆ, ಸಂರಚನಾತ್ಮಕ-ಕಾರ್ಯಾತ್ಮಕ ಸಿದ್ಧಾಂತಗಳು ಮತ್ತು ಸಂಘರ್ಷ ಸಿದ್ಧಾಂತಗಳನ್ನು ಸಂಕ್ಷೇಪಿಸಲಾಯಿತಲ್ಲದೆ, ನಂತರದಲ್ಲಿ ಮುಂದುವರಿದ ಔದ್ಯಮಿಕ ದೇಶಗಳಲ್ಲಿ ವರ್ಗದ ಪ್ರಾಥಮಿಕ ಆಯಾಮದ ಮೂಲಕ ಲಿಂಗಾಧಾರಿತ ಅಸಮಾನತೆಗಳು ಎಷ್ಟರಮಟ್ಟಿಗೆ ತಮ್ಮ ಸಂಚಲನೆಯನ್ನು ಮುಂದುವರಿಸಿವೆ ಎನ್ನುವುದನ್ನು ಚರ್ಚಿಸಲಾಯಿತು.

***